# ರೋಮನ್ ಶಿಲುಬೆ ಮೇಲೆ ಆರು ತಾಸುಗಳು

## ಓದುವ ಮನೆಪಾಠ #40

VII. ಯೇಸುವಿನ ಸೇವೆಯ ಅಂತಿಮ ವಾರ (ಮುಂದುವರೆಯುವದು).

H. ಶುಕ್ರವಾರ: ಯೇಸುವಿನ ಮರಣದ ದಿನ (ಮುಂದುವರೆಯುವದು).

9. ಯೇಸುವಿನ ಮರಣ: ಕ್ರೂಜಿತನಾದನು (ಮುಂದುವರೆಯುವದು).

c. ಕ್ರೂಜೆಯ ಮೊದಲ ಮೂರು ತಾಸುಗಳು (ಮುಕ್ತಾಯವಾದದ್ದು) (ಮತ್ತಾಯ 27:35, 36, 39-44; ಮಾರ್ಕ 15:24, 29-32; ಲೂಕ 23:34-37, 39-43; ಯೋಹಾನ 19:23-27).

d. ಕ್ರೂಜೆಯ ಕಡೇಯ ಮೂರು ತಾಸುಗಳು (ಮತ್ತಾಯ 27:45-56; ಮಾರ್ಕ 15:33-41; ಲೂಕ 23:44-49; ಯೋಹಾನ 19:28-30).

## ಪರಿಚಯ

ಯೇಸುವಿನ ಮರಣದ ಕುರಿತಾದ ಎರಡನೆಯ - ಭಾಗವು ಇದಾಗಿದೆ. ಕ್ರಿಸ್ತನ ದೈಹಿಕ ಬಾಧೆಗಳ ಆಳವಾದ ಅರಿವನ್ನು ಮೂಡಿಸಲು, ಶಿಲುಬೆಯ ಕೆಲವು ವಿಚಾರಗಳನ್ನು ಇಲ್ಲಿ ವಿಮರ್ಶಿಸಲಾಗಿದೆ.

ಕ್ರೂಜೆಯ ಕುರಿತಾಗಿ ಜಾನ್ ಫ್ರಾಂಕ್ಲಿನ್ ಕಾರ್ಟರ್‌ರವರು ಅದು ಬಹಳ ಅವಮಾನಿಯ, ಹಾಗೂ "ಕ್ರೂರವಾದ, ಶಿಕ್ಷೆಯ ವಿಧಿ ವಿಧಾನಗಳಾಗಿದ್ದವು ಎಂದಿರುವರು."[1] ಪರ್ಶಿಯನ್ನರು, ಐಗುಪ್ತದವರು, ಬಾಬೇಲಿನವರು, ಸುರೋಫೋಯಿನೀಕ್ಯೆಯವರು ಹಾಗೂ ಇತರರು ಶತಮಾನಗಳಿಂದ ಬಳಸಿದ ಕ್ರೂರ ಪದ್ದತಿಯಾಗಿದೆ. "ಅತಿವೇದನೆಯನ್ನು ಹೊಂದಿ, ಮಂದಗತಿಯ ಮರಣ ಉಂಟು ಮಾಡುವ ಈ ಪದ್ಧತಿಯಲ್ಲಿ ರೋಮಾಯರು ಅನುಭವಿಗಳಾಗಿದ್ದರು."[2]

ನಿಕಟವಾದ "ದೈವತ್ವದ" ಈ ವಿಧಾನದಲ್ಲಿ, ಒಬ್ಬ ವ್ಯಕ್ತಿಯನ್ನು ಶಿಲುಬೆಗೆ ಮೊಳೆಗಳಿಂದ ಜಡಿಯುತ್ತಿದ್ದರು, ಆದರೆ ದೇಹದ ಪ್ರಮುಖ ಭಾಗಗಳಿಗೆ ಯಾವುದೇ ಧಕ್ಕೆಯಾಗುತ್ತಿರಲಿಲ್ಲ. ಇದರಿಂದ ಮಂದಗತಿಯ ಮರಣ ಉಂಟಾಗುತ್ತಿತ್ತು. ಅಪರಾಧಿಯು ಶಿಲುಬೆಯ ಮೇಲೆ ಮೂರರಿಂದ ನಾಲ್ಕು ದಿವಸಗಳ ಕಾಲ ಬದುಕಿರುತ್ತಿದ್ದನು. ಗಾಯವಾದ ದೇಹದ ಮೇಲೆ ಪಕ್ಷಿಗಳು ಹಾಗೂ ಕ್ರಿಮಿಗಳು ದಾಳಿ ಮಾಡುತ್ತಿದ್ದವು, ಈ ಸಂದರ್ಭದಲ್ಲಿ ಆ ಅಪರಾಧಿಯು ರೋಧನೆಯನ್ನು ಬಾಯಾರಿಕೆಯನ್ನು ಹಾಗೂ ಜ್ವರವನ್ನು ಹೊಂದಿರುತ್ತಿದ್ದನು - ಅಂತಿಮವಾಗಿ, ಮರಣದ ಮೂಲಕ ಬಿಡುಗಡೆಯಾಗುತ್ತಿದ್ದನು.

ಅಮೇರಿಕನ್ ಜರ್ನಲ್ ಬರಹದ ಪ್ರಕಾರ, *Journal of the American Medical Association,*[3] "ಮರಣಕ್ಕೆ [ಶಿಲುಬೆಯ ಮರಣ] ಕಾರಣವಾದವುಗಳು ಅನೇಕವಾಗಿವೆ." ಮೊದಲನೆಯದಾಗಿ, "ಶಿಲುಬೆಯ ಶಿಕ್ಷೆಯಿಂದ ... ದೀರ್ಘವಾದ ವೇದನೆ" ಹಾಗೂ ಮಣಿಕಟ್ಟುಗಳಿಗೆ ಮೊಳೆಗಳನ್ನು ಹಾಕಿರುವದರಿಂದ, "ನರಗಳ ದೌರ್ಬಲ್ಯವಾಗಿ, ಎರಡು ಕೈಗಳು ಸೆಳೆದುಕೊಳ್ಳುತ್ತಿದ್ದವು ಕಾಲುಗಳು ಸಹ ಇದೇ ವೇದನೆಗೆ ಒಳಗಾಗುತ್ತಿದ್ದವು." ನಿಧಾನಗತಿಯಿಂದ ರಕ್ತವು ಸೋರಿ ಹೋಗುತ್ತಿತ್ತು. ಈ ಕಾರಣಗಳಿಂದ, ಶಿಲುಬೆಗೆ ಹಾಕಲ್ಪಟ್ಟವನು ಬಲಹೀನನಾಗುತ್ತಿದ್ದನು.

ಹೇಗೂ, "ಶಿಲುಬೆಯ ಮರಣದ [ಭಯಾನಕ] ಪರಿಣಾಮವೇನೆಂದರೆ ... ಉಸಿರಾಟದಲ್ಲಿನ ಏರುಪೇರು."[4] ಇನ್ನೊಂದು ಮಾತಿನಲ್ಲಿ ಹೇಳುವುದಾದರೆ, "ಆ ವ್ಯಕ್ತಿಯು ಉಸಿರಾಡುವದು ಬಹಳ ಕಷ್ಟಕರವಾಗಿತ್ತು. [ಮೊಳೆಗಳಿಂದ ಜಡಿಯಲ್ಪಟ್ಟ] ಕಾಲುಗಳನ್ನು[5] ಒತ್ತಿ ಹಿಡಿದು ದೇಹವನ್ನು ಕುಗ್ಗಿಸಿ ಉಸಿರಾಡಬೇಕಿತ್ತು. ಮೊಣಕೈಯನ್ನು ಹಿಗ್ಗಿಸಿ, [ಭುಜವನ್ನು ಎಳೆಯಬೇಕಿತ್ತು]." ಇದರ ಪರಿಣಾಮವಾಗಿ ಭಯಂಕರ ವೇದನೆ ಉಂಟಾಗಿ ಸ್ನಾಯು ಸೆಳೆತ ಉಂಟಾಗುತ್ತಿದ್ದವು. "ಆದ್ದರಿಂದ ಪ್ರತಿ ಉಸಿರಾಟವೂ [ಅಧಿಕವಾಗಿ ಹೆಚ್ಚಾಗುತ್ತಾ] ಕಷ್ಟಕರವಾಗಿಯೂ ಮತ್ತು ಬೇಸರವಾಗಿರುತ್ತಿತ್ತು." ನಂತರ "ಆಮ್ಲಜನಕದ ತೊಂದರೆಯಿಂದ" - ಮರಣ ಸಂಭವಿಸುತ್ತಿತ್ತು.

ರೋಮಾಯರ ಶಿಲುಬೆಯ ಮೇಲೆ ಯೇಸು ಕಳೆದ ಆರು ತಾಸುಗಳ ವೇದನೆಯ ನೆನಪಿನಿಂದ, ಇದನ್ನು ಪರಿಶೀಲಿಸೋಣ. ಇದರಿಂದ ಆತನು ಆಡಿದ ಮಾತುಗಳು ಯಾವ ವಿಧದಲ್ಲಿ ಹೊರಹೊಮ್ಮಿತು ಎಂದು ಗಮನಿಸಿ.

## ಮೊದಲ ಮೂರು ತಾಸುಗಳು

## (ಮತ್ತಾಯ 27:35, 36, 39-44; ಮಾರ್ಕ 15:24, 29-32; ಲೂಕ 23:34-37,; 39-43; ಯೋಹಾನ 19:23-27)

ಶಿಲುಬೆಯಲ್ಲಿ, ಕ್ರಿಸ್ತನು ಕಳೆದ ಆರು ತಾಸುಗಳಲ್ಲಿ ಮೂರು ತಾಸುಗಳನ್ನು ವಿಂಗಡಿಸಿ ಎರಡು ಭಾಗ ಮಾಡಿ: ಬೆಳಕಿನ ಮೂರು ಹಾಗೂ (ಮಾರ್ಕ 15:25, 33) ಮತ್ತು ಕತ್ತಲಿನ ಮೂರು ತಾಸುಗಳೆಂದು ಪರಿಗಣಿಸಿದೆ (ಮಾರ್ಕ 15:33).[6] ಮುಂಜಾನೆ 9ರಿಂದ ಮಧ್ಯಾಹ್ನದವರೆಗೆ, ಮೊದಲ ಭಾಗವಾಗಿದೆ.

### ಸಿಪಾಯಿಗಳ ಜೂಜು

ಶಿಲುಬೆಗೆ ನೇತುಹಾಕಲ್ಪಟ್ಟ ವಿಚಾರದವರೆಗೆ, ಹಿಂದಿನ ಪಾಠವನ್ನು ಅಂತ್ಯಗೊಳಿಸಿದ್ದೆವು. ಈ ಕಾರ್ಯಕ್ಕಾಗಿ ನಾಲ್ಕು ಸಿಪಾಯಿಗಳು ನೇಮಿಸಲ್ಪಟ್ಟಿದ್ದರು (ನೋಡಿ ಯೋಹಾನ 19:23). ಅಪರಾಧಿಯ ಬಟ್ಟೆಯನ್ನು ಕಳಚಿ ಅವರ ಸುಪರ್ದಿಗೆ ನೀಡಲಾಗಿತ್ತು. ಆ ಸಿಪಾಯಿಗಳು ಯೇಸುವಿನ ಬಟ್ಟೆಯನ್ನು ನಾಲ್ಕು ಭಾಗ ಅಥವಾ ಇನ್ನೂ ಹೆಚ್ಚಿನ ಭಾಗವಾಗಿ ಕತ್ತರಿಸಿದ್ದರು (ಯೋಹಾನ 19:23ಎ). ಆತನು ಧರಿಸಿದ್ದ ಮೇಲಂಗಿ, ತಲೆ ವಸ್ತ್ರ, ಸೊಂಟ ಪಟ್ಟಿ,[7] ಮತ್ತು ಆತನ ಪಾದರಕ್ಷೆಗಳು ಇವು ಆತನ ದೇಹದ ಹೊರಗೆ ದರಿಸಿದ್ದವುಗಳಾಗಿದ್ದವು.

ಈ ವಸ್ತುಗಳನ್ನು ತಾವು ಏನು ಮಾಡಬೇಕೆಂಬ ಗೊಂದಲಕ್ಕೊಳಗಾಗಿದ್ದರು: ಆತನ "ಒಳಂಗಿ" (ಯೋಹಾನ 19:23ಬಿ). KJVಯಲ್ಲಿ "ನಿಲುವಂಗಿ," NIV "ಚರ್ಮಕ್ಕೆ ಅಂಟಿಕೊಂಡಿದ್ದ ಅಂಗಿ" ಎಂದು ಗ್ರೀಕ್ ಭಾಷೆಯು ಹೇಳುತ್ತದೆ. "ಅದನ್ನು ಅಖಂಡವಾಗಿ ಹೆಣೆದದ್ದರಿಂದ, ಅದನ್ನು ಏನು ಮಾಡಬೇಕೆಂದು ತೋಚದಾಗಿತ್ತು" (ಯೋಹಾನ 19:23ಸಿ). ಅಂಥಹ ಅಂಗಿಗಳಿಗೆ, ಮೂರರಿಂದ ನಾಲ್ಕು ಬಟ್ಟೆಗಳನ್ನು ಸೇರಿಸಿ ಹೊಲಿದಿರುತ್ತಿದ್ದರು. ಅವುಗಳನ್ನು ಅಖಂಡವಾಗಿ ಹೆಣೆದಿದ್ದರಿಂದ, ಅದು ದುಬಾರಿಯಾಗಿತ್ತು.[8] ಅದನ್ನು ನಾಲ್ಕು ಭಾಗವಾಗಿ, ಪಾಲು ಮಾಡುವದಾದರೆ, ಅದು ತನ್ನ ಬೆಲೆಯನ್ನು ಕಳಕೊಳ್ಳುತ್ತಿತ್ತು.

ಆದ್ದರಿಂದ ರೋಮಾದವರು, "ನಾವು ಅದನ್ನು ಹರಿಯಬಾರದು ಚೀಟು ಹಾಕಿ ಇದು ಯಾರಿಗೆ ಬರುವದೋ ನೋಡೋಣ ಎಂದರು" (ಯೋಹಾನ 19:24ಎ; ನೋಡಿ ಮತ್ತಾಯ 27:35; ಮಾರ್ಕ 15:24; ಲೂಕ 23:34). ಅವರು ಆತನ ಬಟ್ಟೆಗಳಿಗಾಗಿ ಚೀಟು ಹಾಕಿದ್ದರಿಂದ ಪರೋಕ್ಷವಾಗಿ ಮೆಸ್ಸೀಯನ ಕುರಿತ ಒಂದು ಪ್ರವಾದನೆಯನ್ನು ನೆರವೇರಿಸಿದ್ದರು: "ನನ್ನ ಬಟ್ಟೆಗಳನ್ನು ತಮ್ಮಲ್ಲಿ ಪಾಲು ಮಾಡಿಕೊಂಡರು, ನನ್ನ ಅಂಗಿಗೋಸ್ಕರ ಚೀಟು

ಹಾಕಿದರು" (ಯೋಹಾನ 19:24ಬಿ; ನೋಡಿ ಕೀರ್ತನೆ 22:18).

ಅವರು ಆತನ ಬಟ್ಟೆಗಳಿಗಾಗಿ ಚೀಟು ಹಾಕಿದ ನಂತರ, "ಅಲ್ಲಿ ಕೂತುಕೊಂಡು ಆತನನ್ನು ಕಾಯುತ್ತಾ ಇದ್ದರು" (ಮತ್ತಾಯ 27:36). ಅವರು ಆತನನ್ನು "ಕಾವಲು ಕಾಯುವ" ಕರ್ತವ್ಯದಲ್ಲಿದ್ದರೇ (ನೋಡಿ ಮತ್ತಾಯ 27:54) - ಹೊರತು ಆತನನ್ನು ಕಾಪಾಡುವ ಜವಾಬ್ದಾರಿ ಹೊಂದಿರಲಿಲ್ಲ. ಆತನು ಸಾಯುವ[9] ಮೊದಲೇ, ಆತನ ಸ್ನೇಹಿತರು ಆತನನ್ನು ತೆಗೆದು ಕೊಂಡು ಹೋಗದ ಹಾಗೆ ಕಾಯುತ್ತಿದ್ದರು ಯಾಕೆಂದರೆ ಶಿಲುಬೆಯ ಮರಣ ನಿಧಾನವಾಗಿ ಸಂಭವಿಸುತ್ತಿತ್ತು.

**ಗುಂಪು ಅವಮಾನಕ್ಕೊಳಗಾಯಿತು**

ಕೆಲವು ಜನರಿಗೆ ನಿಂತು ನೋಡುವ ಆಸಕ್ತಿ ಇರುವಂತಹದ್ದು. "ಜನರು ನೋಡುತ್ತಾ ನಿಂತರು" (ಲೂಕ 23:35ಎ). ಹಬ್ಬದ ವಾತಾವರಣ ಇದ್ದದ್ದರಿಂದ, ಅಲ್ಲಿ ಅನೇಕ ಪ್ರವಾಸಿಗಳು ಹಾದು ಹೋಗುತ್ತಿದ್ದರು.[10] ಅವರು ಆತನನ್ನು ಹಾಸ್ಯಮಾಡಿ ದೇವಾಲಯವನ್ನು ನಾಶಮಾಡಿ, ಮೂರು ದಿನಗಳಲ್ಲಿ[11] ಕಟ್ಟುವೆನು ಎಂದು ಹೇಳಿದವನು, "ಅಲ್ಲಿ ಹಾದುಹೋಗುವವರು ತಲೇ ಆಡಿಸಿ ಅಹಾ; ದೇವಾಲಯವನ್ನು ಕೆಡವಿ ಮೂರು ದಿನದಲ್ಲಿ ಕಟ್ಟುವವನೇ, ಶಿಲುಬೆಯಿಂದ ಇಳಿದು ನಿನ್ನನ್ನು ರಕ್ಷಿಸಿಕೋ ಎಂದು ಆತನನ್ನು ಹಂಗಿಸುತ್ತಿದ್ದರು" (ಮಾರ್ಕ 15:29, 30). "ನೀನು ದೇವರ ಮಗನಾಗಿದ್ದರೆ, ಶಿಲುಬೆಯಿಂದ ಇಳಿದು ಬಾ ಎಂದು ಸವಾಲು ಹಾಕಿದರು" (ಮತ್ತಾಯ 27:40ಬಿ).[12]

ಇಂಥಹ ಸಮೂಹವನ್ನು ಯೆಹೂದ್ಯರೇ ಪ್ರಚೋದಿಸಿರಬಹುದು. ತಾವುಗಳು ಕೆಟ್ಟ ವೈರಿಯನ್ನು ನಾಶಪಡಿಸಿದ್ದೆವೆಂದು; ಹೆಮ್ಮೆ ಪಟ್ಟಿರಬಹುದು. "ಅವರೊಂದಿಗೆ" - "ಮುಖ್ಯ ಯಾಜಕರು ಹಾಗೂ ಶಾಸ್ತ್ರಿಗಳು ಒಂದಾಗಿದ್ದರು" (ಮಾರ್ಕ 15:31ಎ) - ಎಂದು ಹಾಸ್ಯಸ್ಪದ ವಾಗಿದೆ:

> ಅವನು ಮತ್ತೊಬ್ಬರನ್ನು ರಕ್ಷಿಸಿದನು; ಅವನು ದೇವರಾರಿಸಿ ಕೊಂಡ ಕ್ರಿಸ್ತನು ಆಗಿದ್ದರೆ ತನ್ನನ್ನು ತಾನೇ ರಕ್ಷಿಸಿಕೊಳ್ಳಲಿ ಅಂದರು (ಲೂಕ 23:35ಬಿ).

> ದೇವರಲ್ಲಿ ಭರವಸವಿಟ್ಟಿದ್ದಾನೆ, ದೇವರು ಅವನಲ್ಲಿ ಇಷ್ಟಪಟ್ಟರೆ ಈಗ ಅವನನ್ನು ಬಿಡಿಸಲಿ; ತಾನು ದೇವರ ಮಗನಾಗಿದ್ದೇನೆಂದು ಹೇಳಿದನಲ್ಲಾ ಎಂದು ಹಾಸ್ಯದಿಂದ ಮಾತಾಡುತ್ತಿದ್ದರು (ಮತ್ತಾಯ 27:43).

ಇಸ್ರಾಯೇಲ್ಯರ ಅರಸನು ಎಂಬ ತಲೆ ಬರಹವನ್ನು ನೋಡಿ, "ಆತನು ಈಗ ಇಳಿದು ಬಂದರೆ, ಆತನನ್ನು ನಂಬುವೆವು" (ಮತ್ತಾಯ 27:42ಬಿ)[13] ಅಂದರು. "ಆತನು ಇತರರನ್ನು ರಕ್ಷಿಸಿದನು ತನ್ನನ್ನು ರಕ್ಷಿಸಿಕೊಳ್ಳಲಾರನೇ ಎಂದು ಬೀಗಿದರು" (ಮಾರ್ಕ 15:31ಬಿ; ಮತ್ತಾಯ 27:42ಎ). ಒಬ್ಬ ವಿವರಣೆಕಾರನು ಈ ವಿಚಾರವನ್ನು ಕುರಿತು, "ಈ ಜನರು ಒಂದು ಸತ್ಯವನ್ನು ಪರೋಕ್ಷವಾಗಿ ದೃಢಿಕರಿಸಿದರು ಎಂದು ವಿವರಿಸಿರುವರು."[14] ಅವರು ಯೋಚಿ ಸಿದಕ್ಕಿಂತಲೂ, "ಆಳವಾದ ಸತ್ಯವನ್ನು ಪ್ರಕಟಿಸಿದರು: ತನ್ನನ್ನು ರಕ್ಷಿಸಿಕೊಳ್ಳದೆ, ಇತರರನ್ನು ಹೇಗೆ ರಕ್ಷಿಸುವರು ಎಂದು ತಿಳಿದರು?"[15]

ಇಂಥಹ ವಿಚಾರವನ್ನು ಸಿಪಾಯಿಗಳು ಆಹ್ವಾನಿಸಿದರು. "ನೀನು ಯೆಹೂದ್ಯರ ಅರಸನಾಗಿದ್ದರೆ ನಿನ್ನನ್ನು ರಕ್ಷಿಸಿಕೋ ಅಂದರು!" (ಲೂಕ 23:36, 37). ಆತನ ಅಕ್ಕಪಕ್ಕದಲ್ಲಿ ನೇತು ಹಾಕಲ್ಪಟ್ಟವರೂ ಸಹ ಆ ಜನರೊಂದಿಗೆ ಸೇರಿಕೊಂಡರು. ಅವರು ಅವಮಾನಕ್ಕೆ ಒಳಗಾಗಿದ್ದರೂ, ಮಧ್ಯದ ಶಿಲುಬೆಯು ಜನರ ಆಸಕ್ತಿಯಾಗಿತ್ತು. ಆ ಕಳ್ಳರು ಸಹ ತಮ್ಮ ಕೋಪ ವನ್ನು ಈ ರೀತಿಯಾಗಿ ಪ್ರದರ್ಶಿಸಿದರು (ಮತ್ತಾಯ 27:44; ಮಾರ್ಕ 15:32ಬಿ).

**ಕರ್ತನು ಪ್ರಾರ್ಥಿಸಿದನು**

ಪ್ರವಾಹದಂತಹ ಹಗೆಯುಳ್ಳ ಸ್ವಭಾವದವರನ್ನು ಯೇಸು ಹೇಗೆ ಎದುರಿಸಿದನು? ಅವನ್ನು ನಾಶಮಾಡಲು ದೇವದೂತರ ಹನ್ನೆರಡು ದಂಡುಗಳನ್ನು ಕರೆದನೇ (ಮತ್ತಾಯ 26:53) ಇಲ್ಲಿ ಆತನು ಪ್ರಾರ್ಥಿಸಿದನು? ತಮ್ಮ ಹಿಂಸಕರಿಗಾಗಿ ಪ್ರಾರ್ಥಿಸಬೇಕೆಂದು ಯೇಸು ತನ್ನ ಶಿಷ್ಯರಿಗೆ ಬೋಧನೆ ಮಾಡಿದ್ದನು (ಮತ್ತಾಯ 5:44). ಈಗ ತಾನು ಬೋಧಿಸಿದ್ದನ್ನು, ಪ್ರಾರ್ಥನೆಯ ಮೂಲಕ ಕಾರ್ಯರೂಪಕ್ಕೆ ತಂದನು, "ತಂದೆಯೇ ಅವರನ್ನು ಕ್ಷಮಿಸು; ತಾವು ಏನು ಮಾಡುತ್ತಾರೆಂದು ಅರಿಯರು ಅಂದನು" (ಲೂಕ 23:34ಎ).[16]

**ಕಳ್ಳನ ಮನವಿ**

ಮೊದಲ ಮೂರು ತಾಸುಗಳ ನಡುವೆ ಒಂದು ಪ್ರಮುಖ ಸಂಗತಿಯು ಜರುಗಿತು: ಕಳ್ಳನ ಮುಂದೆ ಇರುವಂತಹ ಈ ದೃಶ್ಯವು ಅವನ ಮೇಲೆ ಪ್ರಭಾವ ಬೀರಿತು. ಪ್ರಾಥಮಿಕ ಹಂತದಲ್ಲಿ, ಆ ಇಬ್ಬರು ಕಳ್ಳರು ಸಹ ಯೇಸುವನ್ನು ನಿಂದಿಸಿದ್ದರು (ಮತ್ತಾಯ 27:44; ಮಾರ್ಕ 15:32). ಆದರೆ ಸಮಯವು ದಾಟುವಾಗ, ಯೇಸುವಿನಲ್ಲಿದ್ದ ಗೌರವ ಹಾಗೂ ಉನ್ನತ ಆತ್ಮವನ್ನು ಆ ಇಬ್ಬರ ಕಳ್ಳರಲ್ಲಿ ಒಬ್ಬನು ಗಮನಿಸಿದನು.[17] ಶಿಲುಬೆಯಲ್ಲಿದ್ದ ಜನರು, ಇತರೆ ಜನರನ್ನು ಶಪಿಸಿ ಸಾಯುವದನ್ನು ಅವನು ಕಂಡಿದ್ದರೂ, ಇಲ್ಲಿ ಯೇಸು, ಜನರಿಗಾಗಿ ಪ್ರಾರ್ಥಿಸುವದನ್ನು ಕಂಡನು.

ಒಬ್ಬ ಕಳ್ಳನು, ಆತನನ್ನು ನಿಂದಿಸಲು ಆರಂಭಿಸಿದನು, "ನೀನು ಕ್ರಿಸ್ತನಾಗಿದ್ದರೆ? ನಿನ್ನನು ನೀನು ರಕ್ಷಿಸಿಕೋ!" (ಲೂಕ 23:39). ಆದರೆ ಇನ್ನೊಬ್ಬನು ಯೇಸುವಿನ ಪರವಾಗಿ ಪ್ರತಿಪಾದಿಸಿ: "ಎರಡನೆಯವನು ಅವನನ್ನು ಗದರಿಸಿ ನೀನು ಇದೇ ದಂಡನೆಯಲ್ಲಿರುವಾಗಲೂ ದೇವರಿಗೆ ಹೆದರುವದಿಲ್ಲವೋ? ನಾವಂತೂ ನ್ಯಾಯವಾಗಿ ದಂಡನೆಯಲ್ಲಿದ್ದೇವೆ, ನಾವು ಮಾಡಿದ್ದಕ್ಕೆ ತಕ್ಕ ಪ್ರತಿಫಲವನ್ನು ಹೊಂದುತ್ತಾ ಇದ್ದೇವೆ; ಈತನಾದರೋ ಅಲ್ಲದ್ದೇನೂ ಮಾಡಲಿಲ್ಲ" (23:40, 41).

ನಂತರ ಅವನು ಯೇಸುವಿನ ಕಡೆಗೆ ತಿರುಗಿ, "ಯೇಸುವೇ, ನೀನು ನಿನ್ನ ರಾಜ್ಯವನ್ನು ಪಡೆದವನಾಗಿ ಬರುವಾಗ ನನ್ನನ್ನು ನೆನಸಿಕೋ!" ಅಂದನು (ಲೂಕ 23:42). ಯೇಸುವಿನ ರಾಜ್ಯದ ಬಗ್ಗೆ ಅವನು ಹೇಗೆ ತಿಳುಕೊಂಡನು? ಯೇಸುವಿನಿಂದ ಅದನ್ನು ಕೇಳಿದ್ದನೇ? ಅಥವಾ ಯೇಸುವಿನ ತಲೆಯ ಮೇಲಿದ್ದ ಬರವಣಿಗೆಯಿಂದ ತಿಳಿದನೇ? ಅದರ ಮಾಹಿತಿ ಇರುವದಿಲ್ಲ. ದೇವರ ರಾಜ್ಯದ ಅರಿವು ಅವನಿಗೆ ಇದ್ದರೂ ಇರಬಹುದು, ಆದರೆ ಯೇಸು, ಯೆಹೂದ್ಯರ ಅರಸನು ಎಂದು ಗ್ರಹಿಸಿದ್ದನು (ಮೆಸ್ಸೀಯನಿಗಾಗಿ ಕಾದಿದ್ದರು ಎಂದು), ಯೇಸು ಮರಣವನ್ನು ಅನುಭವಿಸುವದಕ್ಕಿದ್ದರೂ - ಆತನು ತನ್ನ ರಾಜ್ಯವನ್ನು ಸ್ಥಾಪಿಸುವನು ಎಂದು ಅರಿತಿದ್ದು! ಕ್ರಿಸ್ತನ ಶಿಷ್ಯರಿಗಿಂತಲೂ, ಈ ಕಳ್ಳನು ಹೆಚ್ಚಾದ ನಂಬಿಕೆಯನ್ನು ತೋರಿ ದನು.[18]

ಯೇಸು "ತನ್ನ ಹೆಸರಿಗೆ ತಕ್ಕದಾದ ಸೇವೆಯನ್ನು ಮಾಡಿದ್ದನು."[19] ಆತನು ವೇದನೆಯಲ್ಲಿದ್ದ ಕಳ್ಳನನ್ನು ನೋಡಿ, "ಈ ಹೊತ್ತೇ ನನ್ನ ಸಂಗಡ ಪರದೈಸಿನಲ್ಲಿರುವ ಎಂದು ನಿನಗೆ ನಿಜನಿಜವಾಗಿ ಹೇಳುತ್ತೇನೆ ಅಂದನು" (ಲೂಕ 23:43). ಮರಣ ಹೊಂದಿದ ನೀತಿಯುಳ್ಳ ಆತ್ಮಗಳು "ಪರದೈಸ" ಎಂಬ ಪ್ರದೇಶದಲ್ಲಿರುತ್ತವೆ.[20] ಮಾನಸಾಂತರ ಹೊಂದಿದ ಕಳ್ಳನು ಶಿಲುಬೆಯಿಂದ ಬಿಡುಗಡೆ ಹೊಂದದೆ ಇದ್ದರೂ ಪಾಪದ ಬಂದನದಿಂದ ಮುಕ್ತನಾದನು. ಅವನಿಗೆ ಈ ಜೀವಿತದಲ್ಲಿ ಬಿಡುಗಡೆಯಾಗದಿದ್ದರೂ, ಮುಂದಿನ ಜೀವಿತಕ್ಕಾಗಿ ಬಿಡುಗಡೆಹೊಂದಿದನು.[21]

**ಸ್ನೇಹಿತರು ದುಃಖಿಸಿದರು**

ಶಿಲುಬೆಯ ಬಳಿಯಲ್ಲಿದ್ದವರಲ್ಲಿ ಕೆಲವರು ಆತನನ್ನು ದ್ವೇಷಿಸದೆ, ಆತನಿಗಾಗಿ ದುಃಖಿಸುವವರೂ ಇದ್ದರು. ಅವರಲ್ಲಿ ಯೇಸುವಿನ ತಾಯಿಯಾದ ಮರಿಯಳು ಸಹ ಇದ್ದಳು

(ಯೋಹಾನ 19:25ಬಿ). ಸಾಯುತ್ತಿದ್ದ ಮಗನಿಗಾಗಿ ದುಃಖಿಸುತ್ತಿದ್ದ ಮರಿಯಳ ಸ್ಥಾನದಲ್ಲಿ ನಿಮ್ಮನ್ನು ನೀವೆ ಹೋಲಿಸಿಕೊಳ್ಳಿರಿ. ಸಿಮೆಯೋನನು ಈ ಕುರಿತು ಮುಂದಾಗಿ ಹೇಳಿದ್ದನು, "... ಇದಲ್ಲದೆ ನಿನ್ನ ಪ್ರಾಣಕ್ಕಂತೂ ಅಲಗು ನಾಟಿದಂತಾಗುವದು" (ಲೂಕ 2:35ಎ). ಆ ಭಯಾನಕ ಅಲಗು ಮರಿಯಳ ಕಡೆಗೆ ಬಾಗಿತ್ತು.

ಮರಿಯಳ ಸಂಗಡ ಇತರೆ ಸ್ತ್ರೀಯರು ಸಹ ಇದ್ದರು. ಯೋಹಾನನು ಅವರನ್ನು ಕುರಿತು: "ಆತನ ತಾಯಿಯೂ, ತಂಗಿಯೂ ಕ್ಲೋಪನ ಹೆಂಡತಿಯಾದ ಮರಿಯಳು, ಮಗ್ದಲದ ಮರಿಯಳು ಇದ್ದರು ಎಂದಿರುವನು" (ಯೋಹಾನ 19:25ಸಿ). ಶಿಲುಬೆಯ ಬಳಿಯಿದ್ದ ಸ್ತ್ರೀಯರ ಕುರಿತಾಗಿ ಯೋಹಾನನ ಪ್ರಕಾರ (ಮತ್ತಾಯ 27:56; ಮಾರ್ಕ 15:40), ಸಲೋಮಿಯು ಮರಿಯಳ ಸಹೋದರಿ ಹಾಗೂ ಯೋಹಾನ ಹಾಗೂ ಯಾಕೋಬನ, ಮತ್ತು ಜೆಬೆದಾಯನ ಹೆಂಡತಿ ಎಂಬ ವಿವರಣೆ ಇದೆ.[22] ಹಿಂದಿನ ಕಥೆಯಲ್ಲಿ ಸಲೋಮಿಯ ಬಗ್ಗೆ ತಿಳಿದಿದ್ದೇವೆ (ಮತ್ತಾಯ 20:20, 21).

"ಕ್ಲೋಪನ ಹೆಂಡತಿಯಾದ ಮರಿಯಳು" ಎಂದರೆ ಯೋಹಾನನ ಪ್ರಕಾರ, "[ಚಿಕ್ಕ] ಯಾಕೋಬನ ಮತ್ತು ಯೋಸೆಫನ [ಯೋಸೆಯ] ತಾಯಿಯಾದ ಮರಿಯ." ಮತ್ತಾಯ ಹಾಗೂ ಮಾರ್ಕನ ಪ್ರಕಾರದಂತೆ ಹಿಂದಿನ ಅಧ್ಯಯನಲ್ಲಿ ಆಕೆಯ ವಿಚಾರ ನೋಡಿದ್ದೇವೆ (ಲೂಕ 8:2, 3). ಮುಂದಿನ ಪಾಠದಲ್ಲಿ ತಿರುಗಿ ನೆನಪು ಮಾಡಲಾಗುವದು.

ಅಲ್ಲಿ, ಯೇಸುವಿನ ಪರವಾದ ಇನ್ನು ಅನೇಕ ಜನರಿದ್ದರು (ನೋಡಿ ಲೂಕ 23:49ಎ; ಮಾರ್ಕ 15:41ಬಿ). ಅಲ್ಲಿ ಕೆಲವು ಅಪೊಸ್ತಲರೂ ಸಹ ಇರಬಹುದು. ಅಪೊಸ್ತಲನಾದ ಯೋಹಾನನು ಸಹ ಖಂಡಿತವಾಗಿ ಅಲ್ಲಿದ್ದನು (ನೋಡಿ ಯೋಹಾನ 19:26[23]).

**ಯೇಸು ಅನುಗ್ರಹಿಸಿದನು**

ಹೇಳತೀರದ ವೇದನೆಯನ್ನು ಯೇಸು ಅನುಭವಿಸುತ್ತಿದ್ದರೂ, ತನ್ನ ತಾಯಿಯ ಬಗ್ಗೆ ಕಾಳಜಿವಹಿಸಿದ್ದನು.[24] "ಯೇಸು ತನ್ನ ತಾಯಿಯನ್ನು ಹತ್ತಿರದಲ್ಲಿ ನಿಂತಿದ್ದ ತನ್ನ ಪ್ರೀತಿಯ ಶಿಷ್ಯರನ್ನು ನೋಡಿ ತಾಯಿಗೆ - ಅಮ್ಮಾ,[25] ಇಗೋ ನಿನ್ನ ಮಗನು ಎಂದು ಹೇಳಿದನು. ತರುವಾಯ ಆ ಶಿಷ್ಯನಿಗೆ - ಇಗೋ ನಿನ್ನ ತಾಯಿ ಎಂದು ಹೇಳಿದನು!" (ಯೋಹಾನ 19:26, 27ಎ). ಈ ವಿಧದಲ್ಲಿ, ಯೇಸು ತನ್ನ ತಾಯಿಯ ಕೊರತೆಯನ್ನು ನೀಗಿಸಿದನು.[26]

"ಆ ಹೊತ್ತಿನಿಂದ ಆ ಶಿಷ್ಯನು ಆಕೆಯನ್ನು ತನ್ನ ಮನೆಯಲ್ಲೇ ಇರಿಸಿ ಕೊಂಡನು" (ಯೋಹಾನ 19:27ಬಿ). ಪ್ರಾಯಶಃ ಅನುಕಂಪದಿಂದ ಅವನು ತಕ್ಷಣವೇ ಆಕೆಯನ್ನು ಗೊಲ್ಗತ್ತದಿಂದ ಕರಕೊಂಡು ಹೋಗಿರಬಹುದು.[27] ಹಬ್ಬದ ಸಂದರ್ಭದಲ್ಲಿ ತನ್ನ ಕುಟುಂಬವು ಇದ್ದಲ್ಲಿಗೆ ಆಕೆಯನ್ನು ಕರೆದೊಯ್ದಿರ ಬಹುದು. ಇದರ ಮೂಲಕ ಮರಿಯಳು ತನ್ನ ಮಗನ ವೇದನೆಯನ್ನು ಕಡಿಮೆಗೊಳಿಸಿರಬಹುದು, ಮತ್ತು ಕ್ರೂರವಾದ ಗುಂಪಿನಿಂದ ದೂರ ಉಳಿದಿರಬಹುದು.

## ಕಡೇಯ ಮೂರು ತಾಸುಗಳು
## (ಮತ್ತಾಯ 27:45-56; ಮಾರ್ಕ 15:33-41
## ಲೂಕ 23:44-49; ಯೋಹಾನ 19:28-30)

**ಒಂದು ರಹಸ್ಯ ಸಂಗತಿ**

"ಇಷ್ಟರಲ್ಲಿ ಹೆಚ್ಚು ಕಡಿಮೆ ಮಧ್ಯಾಹ್ನವಾಗಿತ್ತು" (ಲೂಕ 23:44ಎ) - ಅದು ಸೂರ್ಯನ ಪ್ರಕಾರವು ಹೆಚ್ಚಾಗಿ ಇರುವ ಸಮಯ. "ಆ ದೇಶದ ಮೇಲೆಲ್ಲಾ ಕತ್ತಲೆಯಾಯಿತು, ...

ಆಗಲಿಂದ ಸೂರ್ಯನು ಕಾಂತಿಗುಂದಿದನು" (ಲೂಕ 23:44ಬಿ, 45ಎ). ಇದ್ದಕ್ಕಿದ್ದ ಹಾಗೆ ಕತ್ತಲು ಉಂಟಾಯಿತೇ? ಆ ಕತ್ತಲು ಯೂದಾಯದಲ್ಲೂ ಮತ್ತು ಪೂರ್ಣ ಪಾಲೆಸ್ತೀನಿನಲ್ಲಿ ಉಂಟಾಯಿತು ಎಂಬುದು ನಾವು ಅರಿಯೆವು. "ಆ ದೇಶದ ಮೇಲೆಲ್ಲಾ" ಅಂದರೆ, ನಿರ್ದಿಷ್ಟವಾದ ಈ ಪ್ರದೇಶಗಳು ಸಹ ಇರಬಹುದು. ಈ ಘನವಾದ ವಿಚಾರದ ದಾಖಲೆಗಳನ್ನು ರೋಮಾಯರು ಸಹ ದಾಖಲಿಸಿರುವರು.[28]

ಈ ಕತ್ತಲೆಯನ್ನು ಗ್ರಹಣ ಎಂದಿರುವರು, ಆದರೆ ಪಸ್ಕ ಹಬ್ಬದ ಸಂದರ್ಭದಲ್ಲಿ ಸೂರ್ಯಗ್ರಹಣವು ಇರುವದಿಲ್ಲ. "ಆ ಹಬ್ಬವನ್ನು ಹುಣ್ಣಿಮೆಯ ದಿನದಂದು ಆಚರಿಸಬೇಕಿತ್ತು (ವಿಮೋಚನಕಾಂಡ 12:6)"[29] ಆ ಸೂರ್ಯಗ್ರಹಣ ಸಂಪೂರ್ಣ ಹುಣ್ಣಿಮೆ ದಿವಸ ಬರಲು ಸಾಧ್ಯವಿಲ್ಲ.[30] ಮೋಡಕವಿದ ವಾತಾವರಣವೂ ಇದಕ್ಕೆ ಪುರಾವೆ ನೀಡುವದಿಲ್ಲ. ಆ ಕತ್ತಲೆಯು "ಅಲೌಕಿಕ"ವಾಗಿತ್ತು. (1) ದೇವಾಲಯದ ತೆರೆಯು ಹರಿದು ಹೋದ ಸಂಗತಿಯೊಂದಿಗೆ ಕತ್ತಲೆಯನ್ನು ಲೂಕನು ಹೋಲಿಸಿದ್ದಾನೆ (ಲೂಕ 23:44, 45). ಅದು "ಅದ್ಭುತವೇ" ಆಗಿದೆ.[31] (2) ಯೇಸುವಿನ ಮರಣದ ನಂತರ, ಕತ್ತಲೆಯು ಇಲ್ಲದಾಯಿತು, ಅದರಲ್ಲಿ ದೈವೀಕ ಪಾತ್ರವೂ ಇರುತ್ತದೆ.

"ಒಂಭತ್ತನೇ ತಾಸಿನವರೆಗೆ ಕತ್ತಲೆಯು ಆವರಿಸಿತು" (ಲೂಕ 23:44ಸಿ) - ಆದರೆ 3 ಘಂಟೆಯವರೆಗೆ ಕರ್ತನು ಕಳುಹಿಸಿದ ಕತ್ತಲೆಯ ಬಗ್ಗೆ ಕಾರಣ ಅರಿಯದಿದ್ದರೂ, ಜಾನ್ ಕಾರ್ಟರ್‌ರವರ ಈ ವಿವರಣೆಯು ಸಮಂಜಸವಾಗಿದೆ:

> ... ಹಿಂಸೆ ನೀಡಿದ ಜನರ ಸ್ನೇಹಿತರ ಹಾಗೂ ವೇದನೆಯ ನಡುವೆ ಕತ್ತಲೆಯು ಉಂಟಾಯಿತು. ಕತ್ತಲೆಯು ಸಂಭವಿಸಿದಾಗ ನಿಂದಾಪಮಾನಗಳ ಇಲ್ಲವಾದವು. ಆಗ ಕ್ರಿಸ್ತನು ಮೌನವಾಗಿ ವೇದನೆಯನ್ನು ಅನುಭವಿಸಿದನು. ಆ ಕತ್ತಲಿನ ಸಂದರ್ಭದಲ್ಲಿ ದೇವರು ಸಕಲ ಶಾಪವನ್ನು ತನ್ನ ಮಗನ ಮೇಲೆ ಹಾಕಿದನು (ಯೆಶಾಯ 53:6). ನಾವು ಪಾಪದ ಪಾಲಿಗೆ ಸತ್ತು ನೀತಿವಂತರಾಗಿ ಜೀವಿಸುವಂತೆ ಆತನು ನಮ್ಮ ಪಾಪಗಳನ್ನು ತಾನೇ ತನ್ನ ದೇಹದಲ್ಲಿ ಹೊತ್ತುಕೊಂಡು ಮರಣದ ಕಂಬವನ್ನು ಏರಿದನು; ಆತನ ಬಾಸುಂಡೆಗಳಿಂದ ನಿಮಗೆ ಗುಣವಾಯಿತು (1 ಪೇತ್ರ 2:24). ನಾವು ಆತನಲ್ಲಿ ದೇವರಿಗೆ ಸಮರ್ಪಕರಾದ ನೀತಿಸ್ವರೂಪಿಗಳಾಗುವಂತೆ ದೇವರು ಪಾಪಜ್ಞಾನವಿಲ್ಲದ ಆತನನ್ನು ನಮಗೋಸ್ಕರ ಪಾಪಸ್ವರೂಪಿಯಾಗ ಮಾಡಿದನು (2 ಕೊರಿಂಥ 5:21). ಆತನು ತನ್ನ ರಕ್ತವನ್ನು ಸುರಿಸಿ ನಂಬಿಕೆಯಿದ್ದವರಿಗಾಗಿ ಕೃಪಾಧಾರವಾಗಬೇಕೆಂದು ದೇವರು ಈತನನ್ನು ಮುಂದಿಟ್ಟನು (ರೋಮಾಪುರ 3:25). ಆದರೆ ಆ ರಾಜ್ಯದ ಬಾಧ್ಯಸ್ಥರು ಹೊರಗೆ ಕತ್ತಲೆಗೆ ಹಾಕಲ್ಪಡುವರು; ಅಲ್ಲಿ ಗೋಳಾಟವೂ ಕಟಕಟನೆ ಹಲ್ಲು ಕಡಿಯೋಣವೂ ಇರುವವು ಎಂದು ಹೇಳಿದನು (ಮತ್ತಾಯ 8:12). ಯೇಸು ತಿರಿಗಿ ಅವರ ಸಂಗಡ ಮಾತಾಡಲಾರಂಭಿಸಿ - ನಾನೇ ಲೋಕಕ್ಕೆ ಬೆಳಕು; ನನ್ನನ್ನು ಅನುಸರಿಸುವವನು ಕತ್ತಲೆಯಲ್ಲಿ ನಡೆಯದೆ ಜೀವಕೊಡುವ ಬೆಳಕನ್ನು ಹೊಂದಿದವನಾಗಿರುವನು ಎಂದು ಹೇಳಿದನು (ಯೋಹಾನ 8:12).[32]

**ಅದರ ಅರ್ಥ**

ಕತ್ತಲೆಯ ಹತ್ತಿರವಾಗುವಾಗ ಕ್ರಿಸ್ತನು ನಾಲ್ಕು ಸಾರಿ ಮಾತಾಡಿದನು. ಮೊದಲನೆಯದು "ಸುಮಾರು ಮೂರು ಗಂಟೆ" ಆತನು ಅನುಭವಿಸುತ್ತಿರುವ ವೇದನೆಯನ್ನು ಪ್ರತಿಬಿಂಬಿಸುವ ಮಾತನ್ನು ಹೇಳಿದರು: "ಆತನು ಏಲೀ, ಏಲೀ ಲಮಾ ಸಬಕ್ತಾನಿ" ಎಂದು ಹೇಳಿದನು (ಮತ್ತಾಯ 27:46ಎ). ಇಬ್ರಿಯ ಹಾಗೂ ಅರಾಮ್ಯ ಭಾಷೆಯಲ್ಲಿ[33] "ನನ್ನ ದೇವರೇ, ನನ್ನ ದೇವರೇ ಯಾಕೆ ನನ್ನನ್ನು ಕೈ ಬಿಟ್ಟಿದಿ?" (ಮತ್ತಾಯ 27:46ಬಿ). ನಮ್ಮ ಪಾಪದ ನಿಮಿತ್ತವಾಗಿ ಯೇಸುವನ್ನು - ಅಲ್ಪಕಾಲ - ದೇವರು ಕೈ ಬಿಟ್ಟನು.

"ಇಲ್ಲಿ ಕ್ರಿಸ್ತನು ತನ್ನ ಮರಣದ ಕಾರಣವನ್ನು ಅರಿಯಲಿಲ್ಲವೇ - ಅದನ್ನು

ಅರಿತಿದ್ದರೆ, ನನ್ನನ್ನು *ಯಾಕೆ* ಕೈ ಬಿಟ್ಟಿದ್ದಿ ಎಂದು ಯಾಕೆ ದೇವರಿಗೆ ಪ್ರಾರ್ಥಿಸುತ್ತಿದ್ದನು?" ಎಂಬ ಪ್ರಶ್ನೆಯು ಉದ್ಭವಿಸುತ್ತದೆ. ಕೀರ್ತನೆ 22:1ರ ಹೇಳಿಕೆಯನ್ನು ಯೇಸು ನೀಡಿರುವನು. ಅದು ಅಪನಂಬಿಕೆಯ ಹೇಳಿಕೆಯಾಗಿರದೆ, ನಂಬಿಕೆಯ ಕುರಿತಾಗಿದೆ. ಕೀರ್ತನೆಯ ಹೇಳಿಕೆಯನ್ನು ನೀಡಿರುವ ಮೂಲಕ, ಆತನ ಮರಣ ಆಕಸ್ಮಿಕವಲ್ಲ ಎಂಬುದು ದೃಢಪಟ್ಟಿದೆ. ಅದು ದೇವರ ಉದ್ದೇಶ ಹಾಗೂ ಯೋಜನೆಯ ನೆರವೇರಿಕೆಯಾಗಿದೆ (ನೋಡಿ ಕೀರ್ತನೆ 22:6-8, 12-18).

ಯೇಸುವಿನ ಈ ಪ್ರಾರ್ಥನೆಯನ್ನು ಅನೇಕರು ಗ್ರಹಿಸಲಿಲ್ಲ. ಆತನು ಧಣಿದಿದ್ದರ ನಿಮಿತ್ತ ಆತನ ನುಡಿಗಳು ತೊದಲಿರಬಹುದು; ಈ ಸಮಯದಲ್ಲಿ ಜನರು ನಿರ್ಲಕ್ಷವಹಿಸಿರಬಹುದು. ಕೆಲವರು ವೃದ್ಧರಾದ್ದರಿಂದ (ನನ್ನ ಹಾಗೆ) ಗ್ರಹಣ ಶಕ್ತಿಯನ್ನು ಕಳಕೊಂಡಿರಬಹುದು (ನನ್ನ ಹಾಗೆ). ಕಾರಣವೇನೇ ಇರಲಿ ಆತನು "ಏಲಿ" (ನನ್ನ ದೇವರೆ) ಎಂದಾಗ, ಆತನು "ಎಲಿಯನನ್ನು" ಕರೆಯುತ್ತಿದ್ದಾನೆ (ಮತ್ತಾಯ 27:47). ಜನರು (ಏಲಿಯ ಅಂದರೆ [ಯೆಹೋವನು] ನನ್ನ ದೇವರು) ಈತನು ಏಲಿಯನನ್ನು ಕರೆಯುತ್ತಿದ್ದಾನೆ ಎಂದು ಜನರು ನಿರ್ಣಯಿಸಿದರು (ಮತ್ತಾಯ 17:10). "ಏಲಿಯನು ಬಂದು ರಕ್ಷಿಸುವನೋ ನೋಡೋಣ ಎಂದು ಕೆಲವರು ಹೇಳಿದರು" (ಮತ್ತಾಯ 27:49; ಮಾರ್ಕ 15:36).

ಅವರ ಅಪಾರ್ಥವನ್ನು ಯೇಸು ಸ್ಪಷ್ಟಪಡಿಸಲು ಯತ್ನಿಸಲಿಲ್ಲ. ಅದರ ಬದಲಾಗಿ: "ಇದಾದ ಮೇಲೆ ಯೇಸು ಈಗ ಎಲ್ಲಾ ತೀರಿತೆಂದು[34] ತಿಳಿದು ಶಾಸ್ತ್ರದ ಮಾತು ನೆರವೇರುವಂತೆ[35] ನನಗೆ ನೀರಡಿಕೆ ಆಗಿದೆ ಅಂದನು" (ಯೋಹಾನ 19:28). ಅಲ್ಲಿ ಹುಳಿರಸ ತುಂಬಿದ ಸ್ಪಂಜನ್ನು ಹಿಸ್ಸೋಪ್[36] ಗಿಡದ ಕೋಲಿಗೆ ಸಿಕ್ಕಿಸಿ ಆತನ ಬಾಯಿಗೆ ಮುಟ್ಟಿಸಿದರು (ಯೋಹಾನ 19:29; ನೋಡಿ ಮಾರ್ಕ 15:36ಎ). ಈ ಹಿಂದೆ ಆತನು ಅಂಥಹದ್ದನ್ನು ನಿರಾಕರಿಸಿದ್ದರೂ ಈಗ ಸ್ವೀಕರಿಸಿದನು (ಮತ್ತಾಯ 27:34; ಮಾರ್ಕ 15:23; ಯೋಹಾನ 19:30ಎ). ಆತನ ಅಂತ್ಯವು ಸಮೀಪವಾದ್ದರಿಂದ, ನೋವು ನಿವಾರಣೆಗಾಗಿ ಯಾವುದೇ ದ್ರವವನ್ನು ಸೇವಿಸುವ ಅಗತ್ಯವಿರಲಿಲ್ಲ. ತನ್ನ ಸ್ವರವನ್ನು ಸರಾಗ ಮಾಡುವ ಕಾರಣದಿಂದ ದ್ರವವನ್ನು ಬಯಸಿರಬಹುದು.

"ಯೇಸು ಆ ಹುಳಿರಸವನ್ನು ತಕ್ಕೊಂಡ ಮೇಲೆ ತೀರಿತು ಅಂದನು!" (ಯೋಹಾನ 19:30ಎ). ಆತನ ವೇದನೆಗಳ ಅಂತ್ಯ ಸಮೀಪವಾದರೂ, ಆತನ ಮಾತುಗಳು ಅಧಿಕ ಪರಿಣಾಮವನ್ನು ಬೀರಿತು, ದೇವರು ಆತನಿಗೆ ನೀಡಿದ ಯೋಜನೆಯನ್ನು ಆತನು *ಸಾಧಿಸಿದ್ದನ್ನು* (ನೋಡಿ ಯೋಹಾನ 17:4[37]). ಇದರ ಕುರಿತು B. S. ಡೀನ್‌ರವರು,

> ತೀರಿತು ಅಂದರೆ, ಅಂತ್ಯವಾಯಿತು ಎಂಬ ಅರ್ಥವಲ್ಲ. ಗೌರವಯುತವಾದ ಒಂದು ಜೀವಿತದ ಅವಧಿಯು ಈ ಭೂಲೋಕದಲ್ಲಿ ಮುಗಿಯಿತು. ಮನುಷ್ಯರ ರಕ್ಷಣ ಕಾರ್ಯ, ಪ್ರವಾದಿಗಳ ಹಾಗೂ ಮೂಲ ಪಿತೃಗಳ ನಿರೀಕ್ಷೆಯ ಮೇರೆಗೆ ಸಿದ್ಧಿಗೆ ಬಂದಿತು. ಹಳೇ ಒಡಂಬಡಿಕೆಯ ಛಾಯೆ, ಕನಸುಗಳು ಗುರುತುಗಳು ಹಾಗೂ ಪ್ರವಾದನೆಗಳು ನೆರವೇರಿದವು ಎಂದು ಬರೆದಿರುವರು.[38]

ಅದು ಭಯದ ಕೂಗು ಸಾಧನೆಯ ಕೂಗು ಎಂದು ಚಾರ್ಲ್ಸ್ ಸ್ವಿಂಡಾಲ್‌ರವರು ತಿಳಿಸಿರುವರು. "ಈಗ ... ಯೇಸು ತನ್ನ ಮುಳ್ಳಿನ ಕಿರೀಟವನ್ನು ಬದಲಾಯಿಸಿರಬಹುದು. ಬೆತ್ತಲೆಯನ್ನು, ನಿಲುವಂಗಿಯನ್ನಾಗಿ, ಅವಮಾನವನ್ನು, ಮಹಿಮೆಯನ್ನಾಗಿ, ಗಾಯಗಳನ್ನು, ಆರಾಧನೆಯನ್ನಾಗಿ ಬದಲಾಯಿಸಿದನು."[39]

ಆ ಮೇಲೆ ಯೇಸು, "ತಂದೆಯೇ, ನನ್ನ ಆತ್ಮವನ್ನು ನಿನ್ನ ಕೈಗೆ ಒಪ್ಪಿಸಿ ಕೊಡುತ್ತೇನೆ"[40] ಎಂದು "ಮಹಾಧ್ವನಿಯಿಂದ"[41] ಕೂಗಿದನು (ಲೂಕ 23:46ಎ). "ಇದನ್ನು ಹೇಳಿದ ನಂತರ" (ಲೂಕ 23:46ಬಿ), "ತಲೆ ಬಾಗಿಸಿ ಆತ್ಮವನ್ನು ಒಪ್ಪಿಸಿ ಕೊಟ್ಟನು" (ಯೋಹಾನ 19:30ಬಿ).

ಕರ್ತನು "ಪ್ರಾಣ ಬಿಟ್ಟನು" (ಲೂಕ 23:46ಸಿ; ಮಾರ್ಕ 15:37) ಅವನು ಶಾಸ್ತ್ರದ ಪ್ರಕಾರ, "ನಮ್ಮೆಲ್ಲರ ಪಾಪದ ನಿವಾರಣೆಗಾಗಿ ಸತ್ತನು" (1 ಕೊರಿಂಥ 15:3).

ಯೇಸು ಏಕೆ ಬೇಗನೆ ಸತ್ತನು ಎಂಬ ವಿಚಾರದಲ್ಲಿ ಕೆಲವರು ಸಂದೇಹ ಪಡುತ್ತಾರೆ,[42] ಆದರೆ ವಾಕ್ಯವು ಅದರ ಅರ್ಥವನ್ನು ತಿಳಿಸುತ್ತವೆ: ಯೇಸು ಸ್ವಂತ ಇಷ್ಟದಂತೆ ಪ್ರಾಣಕೊಟ್ಟನು. ಜನರು ಆತನ ಪ್ರಾಣವನ್ನು ತೆಗೆಯಲಿಲ್ಲ. ತಾನೇ ತನ್ನ ಪ್ರಾಣವನ್ನು ಎಲ್ಲರಿಗಾಗಿ ಕೊಟ್ಟನು (ಯೋಹಾನ 10:17, 18).[43]

**ಒಂದು ಮಹತ್ಕಾರ್ಯ**

ಯೇಸು ಪ್ರಾಣ ಬಿಟ್ಟಾಗ, ಅಲ್ಲಿ ಭೂಕಂಪ ಉಂಟಾಯಿತು (ನೋಡಿ ಮತ್ತಾಯ 27:54): "... ಬಂಡೆಗಳು ಸೀಳಿ ಹೋದವು" (ಮತ್ತಾಯ 27:51). ಭೂಮಿಯು ನಡುಗಿ ಸಮಾದಿಗಳು ತೆರೆದವು. "ನಿದ್ದೆ ಹೋಗಿದ್ದ ಅನೇಕ ಭಕ್ತರ ದೇಹಗಳು ಎದ್ದವು" (ಮತ್ತಾಯ 27:52ಎ). ಮತ್ತಾಯನ ಪ್ರಕಾರ ಅನೇಕ ದಿನಗಳ ನಂತರವು ಮರಣದಿಂದ ಅನೇಕರು ಎದ್ದಿದ್ದರು, "ಮತ್ತು ಆತನು ಎದ್ದ ಮೇಲೆ *ಸಮಾಧಿಗಳೊಂದಿಗೆ ಹೊರಗೆ ಬಂದು* ಪರಿಶುದ್ಧ ಪಟ್ಟಣದೊಳಗೆ ಹೋಗಿ ಅನೇಕರಿಗೆ ಕಾಣಿಸಿಕೊಂಡರು" (ಮತ್ತಾಯ 27:52ಎ, 53; ಒತ್ತಿ ಹೇಳಿದ್ದು ನನ್ನದು).

"ಆಗ ಇಗೋ ದೇವಾಲಯದ ತೆರೆಯು ಮೇಲಿನಿಂದ ಕೆಳಗಿನವರೆಗೆ ಹರಿದು ಎರಡು ಭಾಗವಾಯಿತು" (ಮತ್ತಾಯ 27:51ಎ; ನೋಡಿ ಮಾರ್ಕ 15:38; ಲೂಕ 23:45). "ಭೂಮಿಯ - ಕಂಪನ" ಅತಿಶಯೋಕ್ತಿಯಾಯಿತು![44]

ಗೊಲ್ಗಥದ ಬಳಿಯಿದ್ದವರು ಎರಡು ಮಹತ್ಕಾರ್ಯವನ್ನು ಅನುಭವಿಸಿದರು - ಕತ್ತಲು ಹಾಗೂ ಭೂಕಂಪನ - ಇದು ಮತ್ತು ಶಿಲುಬೆಯ ಮೇಲಿನ ಯೇಸುವಿನ ವರ್ತನೆಯು ಅವರ ಮೇಲೆ ಅಗಾಧವಾದ ಪರಿಣಾಮ ಬೀರಿತ್ತೊ. "ಹೀಗೆ ಪ್ರಾಣ ಬಿಟ್ಟದ್ದನ್ನು ಆತನ ಹತ್ತಿರ ನಿಂತಿದ್ದ ಶತಾಧಿಪತಿಯು" ನೋಡುತ್ತಿದ್ದನು (ಮಾರ್ಕ 15:39ಎ). ಶತಾಧಿಪತಿಯು ಮತ್ತು ಅವನ ಸಂಗಡ ಯೇಸುವನ್ನು ಕಾಯುತ್ತಿದ್ದವರು "ಭೂಕಂಪನವನ್ನು ನಡೆದ ಸಂಗತಿಗಳನ್ನು" ನೋಡಿದರು ಮತ್ತು "ಬಹಳ ಹೆದರಿಕೊಂಡರು" (ಮತ್ತಾಯ 27:54ಎ). ಶತಾಧಿಪತಿಯು ನಡೆದ ಸಂಗತಿಯನ್ನು ನೋಡಿ, "ಈ ಮನುಷ್ಯನು ಸತ್ಪುರುಷನೇ ನಿಜ ಎಂದು ದೇವರನ್ನು 'ಕೊಂಡಾಡಿದನು'" (ಲೂಕ 23:47). ನಂತರ, "ಅವನು ನಿಜವಾಗಿ ಈ ಮನುಷ್ಯನು ದೇವಕುಮಾರನೇ!" ಅಂದನು (ಮತ್ತಾಯ 15:39ಬಿ), ಮತ್ತು ಕಾಯುತ್ತಿದ್ದವರು ಶತಾಧಿಪತಿಯೊಂದಿಗೆ ಕೂಡಿ: "ಅವನು ನಿಜವಾಗಿ ಈ ಮನುಷ್ಯನು ದೇವಕುಮಾರನೇ!" ಅಂದನು (ಮತ್ತಾಯ 27:54ಎ).[45]

ಅದ್ಭುತವನ್ನು ನೋಡಿ ಇತರರು ಸಹ ಆಶ್ಚರ್ಯಪಟ್ಟರು. ಕತ್ತಲಿನ ನಿಮಿತ್ತವಾಗಿ ಅವರೆಲ್ಲರೂ ಮೌನವಾಗಿರಬಹುದು "ಈ ನೋಟಕ್ಕಾಗಿ ಕೂಡಿಬಂದಿದ್ದ ಜನರೆಲ್ಲರು ನಡೆದ ಸಂಗತಿಯನ್ನು ನೋಡಿ ಎದೆಬಡುಕೊಳ್ಳುತ್ತಾ ಹಿಂತಿರುಗಿ ಹೋದರು" (ಲೂಕ 23:48) - ಇದು ಪೂರ್ವ ದೇಶದ ಜನರ ಶೈಲಿಯಾಗಿದೆ (ಯೆಶಾಯ 32:12; ನಹೂಮನು 2:7; ಲೂಕ 18:13). ಕೆಲವು ವಾರಗಳ ನಂತರದಲ್ಲಿ, ಪೇತ್ರನು ಮಾಡಲಿದ್ದ ಸಂದೇಶಕ್ಕಾಗಿ, ಈ ಘಟನೆಗಳು ಜನರನ್ನು ಸಿದ್ಧಪಡಿಸಿದ್ದವು (ನೋಡಿ ಅಪೊಸ್ತಲರ ಕತ್ಯಗಳು 2:14, 23, 36, 37).

## ಮುಕ್ತಾಯ

ಯೇಸು ದೇವರ ಮಗನಾಗಿರುವದರಿಂದ; ಆತನ ಮರಣವು ಊಹಿಸಲಾರದ್ದಾಗಿದೆ. ದೇವರ ಮಗನೇ ಶಿಲುಬೆಯಲ್ಲಿ ಮರಣ ಹೊಂದಿದ್ದನ್ನು ನಾವುಗಳು ನೋಡಿದ್ದೇವೆ! ಅದು ಅಮೋಘವಾದದ್ದು! ಆತನು ನಮ್ಮ ವಿಮೋಚನಾರ್ಥವಾಗಿ ಪ್ರಾಣ ಬಿಟ್ಟನು (1 ಕೊರಿಂಥ 15:3). ಈ ಅದ್ಭುತವಾದ ಸತ್ಯದಲ್ಲಿ ನಾವೆಲ್ಲರೂ ಆನಂದಿಸೋಣ!

## ಸೂಚನೆಗಳು

ಈ ಅಧ್ಯಯನದ ಮೂಲಕ ಅನೇಕ ಪ್ರಸಂಗಗಳನ್ನು ಮಾಡಬಹುದು. ಈ ಸಂಗತಿಗಳು ಜರುಗುವಾಗ "ಅಲ್ಲಿ ನೀನು ಹಾಜರಾತಿ ನೀಡಿರುವೆಯಾ?" ಎಂದು ಈ ಪುಸ್ತಕದಲ್ಲಿದೆ.

ಶಿಲುಬೆಯ ಪ್ರಸಂಗದ ಬಗ್ಗೆ ನಾನು ಹೆಚ್ಚು ಒತ್ತು ನೀಡಲಾರೆ. ಪೌಲನು ಹೀಗೆ ಹೇಳಿದ್ದಾನೆ, "ನನಗಾದರೋ ನಮ್ಮ ಕರ್ತನಾದ ಯೇಸು ಕ್ರಿಸ್ತನ ಶಿಲುಬೆಯ ವಿಷಯದಲ್ಲಿ ಹೊರತು ಹೆಚ್ಚಳಪಡುವದು ಬೇಡವೇ ಬೇಡ" (ಗಲಾತ್ಯ 6:14ಎ). ನನ್ನ ಹತ್ತಿರವಿರುವ ಶಿಲುಬೆ ಮೇಲಿನ ಪ್ರಸಂಗಗಳು: "ಶಿಲುಬೆಯಲ್ಲಿ ಕ್ರಿಸ್ತನ ದೃಶ್ಯ" ಎಂಬ ಪ್ರಸಂಗವು ನನ್ನ ಬಳಿ ಇದೆ. (ಮರಿಯಳು [ಪ್ರೀತಿ], ಬರಬ್ಬನ [ಮನೋಭಾವ], ಸೀಮೋನನ [ಕರ್ತವ್ಯದ ದೃಷ್ಟಿ ಕೋನದಲ್ಲಿ]); "ಕಲ್ವಾರಿಯ ಮೂರು ಶಿಲುಬೆಗಳು" (ಯೇಸುವಿನ ಶಿಲುಬೆ [ವಿಮೋಚನೆಯ ಶಿಲುಬೆ], ಮತ್ತು ಒಬ್ಬ ಕಳ್ಳನ ಶಿಲುಬೆ [ದಂಗೆಯ ಶಿಲುಬೆ], ಮತ್ತೊಬ್ಬ ಕಳ್ಳನ ಶಿಲುಬೆ [ಮಾನಸಾಂತರದ ಶಿಲುಬೆ]). G. C. ಬ್ರೀವರ್ಸ್ "ದೇವರ ಪ್ರೀತಿಯ ವರದ ಕ್ರಿಸ್ತನು" ಎಂಬ ಪ್ರಸಂಗವನ್ನು ನಾನು ಇಷ್ಟಪಡುತ್ತೇನೆ.[46]

---

ಟಿಪ್ಪಣಿಗಳು

[1]John Franklin Carter, *A Layman's Harmony of the Gospels* (Nashville: Broadman Press, 1961), 326. [2]William D. Edwards, Wesley J. Gabel, and Floyd E. Hosmer, "On the Physical Death of Jesus Christ," *Journal of the American Medical Association* (21 March 1986): 1458. [3]Ibid., 1460–61. [4]"ನಿಶ್ವಾಸ" ಉಸಿರಾಟದಲ್ಲಿ ಹೊರಗೆ ಬಿಡುವ ಪ್ರಕ್ರಿಯೆ. [5]ಬಲಿಪಶುವಾಗುವ ದುಷ್ಟನ ಕಾಲಗಳನ್ನು ತನ್ನಷ್ಟಕ್ಕೆ ತಾನೇ ಮೊಳೆ ಹೊಡೆಯುವ ಕಾಲುಗಳನ್ನು ನೇಲಕ್ಕೆ ಎಳೆದುಕೊಳ್ಳುವದ ಅವಶ್ಯವಾಗಿತ್ತು. ಅದರಿಂದ ಅವನು ಉಸಿರಾಟ ಮಾಡಲು ಸಾಧ್ಯವಾ ಗುತಿತ್ತು ದುಷ್ಟನ ಕಾಲುಗಳು ಯಾಕೆ ಮುರಿಯುತ್ತಿದ್ದರು ಎಂದು ವಿವರಿಸುವಾಗ ಅವನ ಸತ್ತಿರುವದನ್ನು ಮನನ ಮಾಡಿಕೊಳ್ಳುವದಕ್ಕಾಗಿ (ಯೋಹಾನ 19:31-33). ಯೋಹಾನ 19:31-33ರ ಮೇಲಿನ ಟಿಪ್ಪಣಿಗಳನ್ನು ನೋಡಿರಿ ನಂತರ ಈ ಪುಸ್ತಕದಲ್ಲಿ ಕಂಡುಕೊಳ್ಳಿರಿ. [6]ಈ ಎರಡು ವಿಭಾಗಗಳಲ್ಲಿ ಯಾವ ಘಟನೆಗಳು ನಿರ್ದಿಷ್ಟ ಕ್ರಮವಾಗಿ ಆಗಿದ್ದವು ಎನ್ನುವದು ನಮಗೆ ಖಚಿತತೆ ಇಲ್ಲ: ಈ ಪ್ರತ್ಯಕ್ಷತೆಯಲ್ಲಿಯೇ ಅದು ಕ್ರಮವಾಗಿ ಅನುಸರಿಸಿರುವ ಒಂದು ಸಾಧ್ಯತೆ ಇದೆ. [7]ಸೊಂಟ ಪಟ್ಟಿ, ಇದನ್ನು ಬಟ್ಟೆಯಿಂದ ಅಥವಾ ಹದಮಾಡಿದ ಚರ್ಮದಿಂದ ಮಾಡಬಹುದು, ಇದನ್ನು "ನಡುಕಟ್ಟು" ಎಂದು ಕರೆಯುವರು ಆಂಗ್ಲ ಭಾಷೆಯ ಸತ್ಯವೇದದ ಅನುವಾದದದಲ್ಲಿ ಅದನ್ನು "ನಡುಪಟ್ಟಿ" ದೇಹದ (ಸುತ್ತಾಕಟ್ಟು) ಎಂದಾಗಿದೆ. ನಾವಿರುವ ಸ್ಥಳದಲ್ಲಿ ಅದನ್ನು "ನಡುಪಟ್ಟಿ" ಎಂದೆ ಯೋಚಿಸುತ್ತಾರೆ ವಸ್ತ್ರದ ಮಧ್ಯದಲ್ಲಿ ಕಟ್ಟಿರುತ್ತಾರೆ ನಾನು ಅದಕ್ಕೆ "ನಡುಪಟ್ಟಿ" ಎನ್ನುವ ಶಬ್ದ ಉಪಯೋಗಿಸಿದ್ದೇನೆ. [8]ಇದನ್ನು ಆಗಾಗ್ಗೆ "ಕರ್ತನು ಧರಿಸಿರುವ ಮೌಲ್ಯಯುಳ್ಳ ವಸ್ತುವೆಂದು" ಕರೆಯಲಾಗುತ್ತದೆ. ಇದನ್ನು ಪರಿಚಯಸ್ಥರಿಂದ ಒಂದೊಂದು ಸಾರಿ ಬಹುಮಾನವಾಗಿ ಕೊಡಲಾಗುತ್ತದೆ. [9]ಸೈನಿಕರು ಸಹ ಇಬ್ಬರು ಕಳ್ಳರ ಬಟ್ಟೆಗಳನ್ನು ಎರಡು ತುಂಡಾಗಿ ಮಾಡಿದರು ಮತ್ತು ಅವರನ್ನು ಶಿಲುಬೆಯಿಂದ ತೆಗೆಯಲು ಸ್ನೇಹಿತರು ಅಡ್ಡಿಪಡಿಸುವದನ್ನು ಕಳ್ಳರು ನೋಡಿರಬಹುದು ಆದರೆ ಕಥೆಯಲ್ಲಿ ಯೇಸುವಿನ ಮೇಲೆಯೆ ಒತ್ತಿ ಹೇಳಲಾಗಿದೆ. [10]ತಲೆಯನ್ನು ಒಂದು ದಿಕ್ಕಿಗೆ ಅಲುಗಾಡಿಸಿ ಅಥವಾ ತೂಗಾಡಿಸಿ ಅಪಹಾಸ್ಯ ತೋರಿಸುವುದು ಆಗಿದೆ (ಕೀರ್ತನೆ 22:7; 109:25; ಯೆಶಾಯ 37:22; ಯೆರೆಮೀಯ 18:16). ಪ್ರತಿಯೊಂದು ಸಂಸ್ಕೃತಿಯು ತಿರಸ್ಕಾರವನ್ನು ಸೂಚಿಸುವ ಭಾವಭಿನಯ ಹೊಂದಿದೆ.

[11]ಯೇಸುವಿನ ಮೊದಲಿನ ಶಬ್ದಗಳು ದೇವಾಲಯವನ್ನು ಪುನಃ ಕಟ್ಟುವದರ ಕುರಿತಾಗಿತ್ತು (ಯೋಹಾನ 2:19). ನಿರ್ದಿಷ್ಟವಾಗಿ ಇದು ಜನರ ಮೇಲೆ ಪ್ರಭಾವ ಬೀರಿತು, ಆದರೆ ಆ ವ್ಯಾಖ್ಯಾನ ತಪ್ಪಾಗಿ ಹೇಳಲಾಗಿದೆ ಮತ್ತು ತಪ್ಪಾಗಿ ಅರ್ಥಮಾಡಿಕೊಂಡಿದ್ದಾರೆ. [12]ಈ ಜನರು ಇದನ್ನು ಅರ್ಥಮಾಡಿಕೊಳ್ಳಲಿಲ್ಲ ಯೇಸು ತನ್ನನ್ನು ರಕ್ಷಿಸಿಕೊಂಡಿದ್ದಿಯಾದರೆ ಮತ್ತು ಶಿಲುಬೆಯಿಂದ ಕೆಳಗೆ ಇಳಿದು ಬಂದರೆ ಮಾನವ ಕುಲವು ರಕ್ಷಿಸಲ್ಪಡುವುದಿಲ್ಲ. ಆತನು ಶಿಲುಬೆ ಮೇಲೆ ಇರುವದನ್ನು ಗ್ರಹಿಸಿಕೊಳ್ಳಲಿಲ್ಲ. ಯಾಕೆಂದರೆ ಆತನು ದೇವಕುಮಾರನು ತಂದೆಯ ಚಿತ್ತವನ್ನು ಮಾಡಲು

ಒಪ್ಪಿಸಿಕೊಟ್ಟನು. [13]ಕೆಲವೇ ದಿವಸಗಳಲ್ಲಿ ಯೇಸು ಮರಣದಿಂದ ಎದ್ದು ಬರುವದು ದೊಡ್ಡ ಅದ್ಭುತವನ್ನು ಮಾಡಲಿಕ್ಕಿದ್ದನು - ಸಮಾದಿಯಿಂದ ಹೊರಗೆ ಬರುವದು - ಆದರೆ ಇದು ಸಹ ಕಠಿಣ ಹೃದಯದ ನಾಯಕರಿಗೆ ನಂಬಿಕೆ ಹುಟ್ಟಿಸಲು ಆಗುತ್ತಿರಲಿಲ್ಲ. ಅವರು ಯೇಸು ಶಿಲುಬೆಯಿಂದ ಕೆಳಗೆ ಇಳಿದು ಬರುವದನ್ನು ಮುಂದೆ ನೋಡಲಿಲ್ಲ ಅದರ ಅಂತ್ಯದಲ್ಲಿ ಲಕ್ಷಾನುಗಟ್ಟಲೆ ಆತ್ಮಗಳಲ್ಲಿ ನಂಬಿಕೆಯನ್ನು ಹುಟ್ಟಿಸಿದನು (ನೋಡಿರಿ ಯೋಹಾನ 12:32). [14]H. I. Hester, *The Heart of the New Testament* (Liberty, Mo.: Quality Press, 1963), 214. [15]B. S. Dean, "An Outline of New Testament History," *Truth for Today* (March 1992): 29. [16]ಯೇಸು ಶಿಲುಬೆಯ ಮೇಲೆ ಹೇಳಿದ ಏಳು ಮಾತುಗಳಲ್ಲಿ ಇದು ಮೊದಲನೆಯದು. ಇದನ್ನು ಅನೇಕ ಸಂದರ್ಭಗಳಲ್ಲಿ ಆಗಾಗ ಮಾತಾಡಿರಬಹುದು ಆದಾಗ್ಯೂ ಯೇಸು ತನಗೆ ಹಿಂಸಿಸುವವರಿಗಾಗಿ ಪ್ರಾರ್ಥಿಸಿದನು, ಅವರು ತಮ್ಮ ಪಾಪಗಳಿಗಾಗಿ ಪಶ್ಚಾತ್ತಾಪಪಡುವವರೆಗೆ ಕ್ಷಮಾಪಣೆ ಹೊಂದುವುದಿಲ್ಲ ಮತ್ತು ದೇವ ಚಿತ್ತವನ್ನು ಮಾಡಿದನು (ಅಪೊಸ್ತಲರ ಕೃತ್ಯಗಳು 2:22, 23, 36, 38). [17]ಮತ್ತಾಯ ಮಾರ್ಕನು ಈ ಇಬ್ಬರು ಕಳ್ಳರು ಯೇಸುವನ್ನು ಅವಮಾನಿಸಿದನು ಎಂದು ತಿಳಿಸಿದ್ದಾರೆ, ಒಬ್ಬ ಕಳ್ಳನು ದೇವಪರವಾಗಿ ನಿಂತನು ಎಂದು ಹೇಳಿದನು. ಒಂದು ಸಂದಾನ ಮಾರ್ಗ ಸರಳವಾದದ್ದು ಅದೇನೆಂದರೆ ಒಬ್ಬ ಕಳ್ಳನು ಮೊದಲು ಕ್ರಿಸ್ತನನ್ನು ಅವಮಾನಿಸಿದನು ಮತ್ತು ತನ್ನ ಮನಸ್ಸನ್ನು ಬದಲಾಯಿಸಿದನು. ಈ ನಿರ್ದಿಷ್ಟ ಕಳ್ಳನ ಪ್ರಾರಂಭಿಕ ಅವಮಾನ ಅವನು ಧೈರ್ಯವಿಲ್ಲದವನಾಗಿರುವ ಸಾಧ್ಯತೆ ಇರುತ್ತದೆ. [18]ಒಂದು ಭಾಗದ ಶಿಲುಬೆಯ ಈ ಕಳ್ಳನ ಕಥೆಯು ರಕ್ಷಣೆಗೆ ಉದಾಹರಣೆಯಾಗಿ ಬೇಕಾಗಿರುವುದಿಲ್ಲ, ಆದರೆ ನಾವು ಕ್ರಿಸ್ತನಿಗಾಗಿ ಹೇಗೆ ಮಾತಾಡುತ್ತೇವೆ ಎಂದು ಅದು ತೋರಿಸುತ್ತದೆ. [19]Dean, 29. [20]ಸತ್ತವರು ಇರುವ ಸ್ಥಳವನ್ನು "ಅಬ್ರಹಾಮನ ಎದೆ" ಎಂದು ಲೂಕ 16:22ರಲ್ಲಿ ಕರೆಯಲಾಗಿದೆ. ಅದು "ಪರದೈಸಿ" ಎಂದು ನಮಗೆ ಗೊತ್ತು ಅದು ಲೂಕ 23ರ ಅಘೋಚರ ಲೋಕವಾಗಿದೆ ಯಾಕೆಂದರೆ ಪೇತ್ರನು ಹೇಳುತ್ತಾನೆ. ಯೇಸು ಸತ್ತಮೇಲೆ ಪಾತಾಳಕ್ಕೆ ಹೋದನು (ಅಪೊಸ್ತಲರ ಕೃತ್ಯಗಳು 2:31). ಇದು ಸಹ ನಮಗೆ ತಿಳಿದಿದೆ. ಲೂಕ 23ರ "ಪರದೈಸಿ" ಅದು ದೇವರಿರುವ "ಪರಲೋಕ" ಇದಲ್ಲ. ಯೇಸು ಆ ಪರದೈಸಿಗೆ ಹೋದನು ಆದರೆ ಕೆಲವು ದಿನಗಳ ನಂತರ, ಯೇಸು ಹೇಳಿದನು ನಾನು ಇನ್ನು ತಂದೆಯ ಬಳಿಗೆ ಏರಿ ಹೋದವನಲ್ಲ (ಯೋಹಾನ 20:17).

[21]ಭೂಮಿಯ ಮೇಲೆ, ಯೇಸು ತಾನು ಅಪೇಕ್ಷೇಪಟ್ಟ ಹಾಗೆಯೇ ಕ್ಷಮಾಪಣೆಯ ಬಲವನ್ನು ಆತನು ವಿಸ್ತರಿಸಿದನು (ನೋಡಿರಿ 2:10). ಆ ಅಧಿಕಾರವನ್ನು ಅನೇಕ ಸಾರಿ ಪ್ರಯೋಗಿಸಿದ್ದಾರೆ: ಇದು ಆ ಕಾಲದಲ್ಲಿ ಇದು ಒಂದಾಗಿತ್ತು. [22]ಈ ಲೇಖನ ಓದಿರಿ "ಸ್ತ್ರೀ ಹಾಗೂ, ಶಿಲುಬೆ" ನಂತರ ಈ ಪುಸ್ತಕದಲ್ಲಿ ಬೋಧನೆಯನ್ನು ನೋಡಿರಿ. [23]ಮತ್ತೊಂದಾವರ್ತಿ, ಯೋಹಾನನು ತನ್ನಷ್ಟಕ್ಕೆ ತಾನೆ "ತಾನು ಯೇಸುವಿನಿಂದ ಪ್ರೀತಿಸಲ್ಪಟ್ಟ ಶಿಷ್ಯನೆಂದು" ಕಲ್ಪಿಸಿಕೊಳ್ಳುತ್ತಿದ್ದಾನೆ. [24]ಅವನು ಮರಿಯಳ ಹಿರಿಯ ಪುತ್ರನಾದ್ದರಿಂದ, ಆಕೆಗೋಸ್ಕರ ವಿಶೇಷ ಜವಾಬ್ದಾರಿ ಇದೆ ಎಂದು ತಿಳಿದುಕೊಂಡನು. ಅಲ್ಲಿ ಅಂಶವೇನೆಂದರೆ ಯೇಸು ಆಕೆಗೋಸ್ಕರ ಇನ್ನೊಂದು ರೀತಿಯ ಸೂಚನೆಯಲ್ಲಿ ವ್ಯವಸ್ಥೆಯನ್ನು ಮಾಡಿದನು ಆ ಯೋಸೆಫನು ಸ್ವಲ್ಪ ಸಮಯದ ಮುಂಚಿತವಾಗಿ ಮರಣಹೊಂದಿದ್ದನು. [25]ಮೊದಲೆ ಹೇಳಿದಂತೆಯೇ, ಒಬ್ಬರ ತಾಯಿಯನ್ನು "ಸ್ತ್ರೀ" ಎಂದು ಕರೆಯುವದು ಒಂದು ಸಮಾಜದಲ್ಲಿ ಅವಮಾನ ಮಾಡಿದ ಹಾಗೆಯೇ ಆಗುತ್ತದೆ NIVನಲ್ಲಿ "ಪ್ರೀತಿಯ ಸ್ತ್ರೀ" ಎಂಬುದಾಗಿದೆ. [26]ತನ್ನ ಸಹೋದರರು ನಂಬಿಕೆಹೊಂದದೆ ಇದ್ದರಿಂದ, ತನ್ನ ತಾಯಿಯ ಜವಾಬ್ದಾರಿಯನ್ನು ಯೇಸು ಅವರಿಗೆ ನೀಡಲಿಲ್ಲ (ಯೋಹಾನ 7:5). ಪ್ರಾಯಶಃ ಅವರ್‍ಯಾರು ಶಿಲುಬೆಯ ಬಳಿ ಇರಲಿಲ್ಲ. ಪುನರುತ್ಥಾನದ ನಂತರ ಅವರು ನಂಬಿದರು (ಅಪೊಸ್ತಲರ ಕೃತ್ಯಗಳು 1:14). ಯೋಹಾನನು ಒಂದು ವೇಳೆ ಬಂದುವಾಗಿದ್ದರೆ (ನೋಡಿರಿ ಈ ಲೇಖನ "ಶಿಲುಬೆ ಹತ್ತಿರ ಸ್ತ್ರೀ" ಇದನ್ನು ನಂತರ ಈ ಪುಸ್ತಕದಲ್ಲಿ ಕಂಡುಕೊಳ್ಳುವಿರಿ), ಯೇಸು ಯಾಕೆ ತನ್ನ ತಾಯಿಯನ್ನು ಕಾಳಜಿ ವಹಿಸಲು ಒಪ್ಪಿಸಿಕೊಟ್ಟನು ಎಂದು ವಿವರಿಸಲು ಸಹಾಯವಾಗುತ್ತದೆ. ಒಂದು ಪ್ರಸಿದ್ಧಿ ಇಲ್ಲದ ಸಂಪ್ರದಾಯದ ಪ್ರಕಾರ, ಮರಿಯಳು ತನ್ನ ಕೊನೆಯ ಕಾಲದವರೆಗೆ ಯೋಹಾನನೊಂದಿಗೆ ಇದ್ದಳು ಎಂದು ತಿಳಿಸುತ್ತದೆ. ಇನ್ನೊಂದು ಪ್ರಭಾವವಿಲ್ಲದ ಸಂಪ್ರದಾಯದ ಪ್ರಕಾರ ಆಕೆಗೆ ಮಾಡಿದ ವ್ಯವಸ್ಥೆ ಕೇವಲ ತಾತ್ಕಾಲವಾಗಿತ್ತು ಮತ್ತು ಆಕೆಯು ತನ್ನ ಅಂತ್ಯದ ದಿನಗಳಲ್ಲಿ ಯೆರೂಸಲೇಮಿನಲ್ಲಿ ಇದ್ದಳು ಎಂದು ತಿಳಿಸುತ್ತದೆ. [27]ಯೇಸು ತನ್ನ ಕೊನೆಯ ಉಸಿರು ಬಿಡುವ ಸಮಯದಲ್ಲಿ ಶಿಲುಬೆಯ ಹತ್ತಿರವಿರುವ ಸ್ತ್ರೀಯರ ಪಟ್ಟಿಯಲ್ಲಿ ಮರಿಯಳು ಇರುವದಿಲ್ಲ (ಮತ್ತಾಯ 27:56; ಮಾರ್ಕ 15:40). ಯೋಹಾನನು ಆಕೆಯನ್ನು ಕರೆದುಕೊಂಡು ಹೋದನು ಎಂದು ಹೇಳುತ್ತದೆ, ತಾನು ತನ್ನಿಷ್ಟದ ಪ್ರಕಾರ ಸಮಯಕ್ಕೆ ಸರಿಯಾಗಿ ಹಿಂತಿರುಗಿ ಅಲ್ಲಿ ಬಂದು ಯೇಸುವಿನ ಮರಣದ ಕುರಿತು ಸಾಕ್ಷಿಹೇಳಿದ್ದಾನೆ (ಯೋಹಾನ 19:35). [28]ಶಿಲುಬೆಯ ಸುತ್ತಾ ಮುತ್ತಾ ಅನೇಕ ಕಾರ್ಗತ್ತಲಿನ ಅಂಶಗಳು ಮತ್ತು ಇತರ ಆ ಸಾಮಾನ್ಯ ಘಟನೆಗಳು ಸುತ್ತವರಿದಿವೆ ನೋಡಿರಿ

"ಕಾಲ್ವರಿಯ ಅದ್ಭುತ" ಎಂಬ ಪಾಠವನ್ನು ನೋಡಿರಿ. [29]M. R. Wilson, "Passover," *International Standard Bible Encyclopedia,* gen. ed. Geoffrey W. Bromiley (Grand Rapids, Mich.: Wm. B. Eerdmans Publishing Co., 1986), 3:676. ವಿಮೋಚನಕಾಂಡ 12:6 ಇದು ತಿಂಗಳಿನ ಹದಿನಾಲ್ಕನೆಯ ದಿನವನ್ನು ವಿವರಿಸುತ್ತದೆ. ಆ ಸಮಯದಲ್ಲಿ ಪೂರ್ಣ ಚಂದ್ರನಿರುತ್ತಾನೆ. [30]ಪೂರ್ಣ ಚಂದ್ರನಿರುವಾಗ ಸೂರ್ಯ ಹಾಗೂ ಚಂದ್ರನು ಒಂದಕ್ಕೊಂದು ವಿರುದ್ಧ ಪದದಲ್ಲಿ ಇರುತ್ತದೆ ಎಂದು ಗುರುತಿಸುತ್ತವೆ (ಚಂದ್ರನು ತನ್ನ ಲಂಬ ಸ್ಥಿತಿಯಲ್ಲಿರುವದರಿಂದ ಅದು ಸೂರ್ಯನ ಕಿರಣಗಳನ್ನು ಪ್ರತಿಬಿಂಬಿಸುತ್ತದೆ). ಚಂದ್ರನು ಭೂಮಿ ಮತ್ತು ಸೂರ್ಯನ ಮಧ್ಯ ಬರುವಾಗ ಸೂರ್ಯಗ್ರಹಣವಾಗುತ್ತದೆ. ಇದು ಸೂರ್ಯ ಮತ್ತು ಚಂದ್ರನು ವಿರುದ್ಧ ದಿಕ್ಕಿನಲ್ಲಿರುವಾಗ ಸಾದ್ಯವಾಗುವುದಿಲ್ಲ.

[31]"ಕಾಲ್ವಾರಿ ಅದ್ಭುತವನ್ನು" ಎಂಬ ಪಾಠವನ್ನು ನಂತರ ಈ ಪುಸ್ತಕದಲ್ಲಿ ನೋಡಿ. [32]Carter, 329. [33]"ಏಲಿ" ಎಂಬುದು ಇಬ್ರಿಯ ಭಾಷೆ "ಲಾಮ ಸಬಕ್ತಾನಿ" ಎನ್ನುವುದು ಅರಾಮ್ಯ ಭಾಷೆಯಾಗಿದೆ. ಮಾರ್ಕನು ಸಹ ಮೊದಲಿನ ಶಬ್ದವನ್ನು ಅರಾಮಿಕ್ ಭಾಷೆಯಲ್ಲಿ ತೆಗೆದುಕೊಂಡಿದ್ದಾನೆ "ಎಲಿ" (ಮಾರ್ಕ 15:34). ಇಲ್ಲಿ ಈ ಎರಡು ಅನುವಾದದಲ್ಲಿ ಸ್ವಲ್ಪ ವ್ಯತ್ಯಾಸವಿದೆ. [34]ದೇವರು ತಾನು ಈ ಭೂಮಿಗೆ ಬಂದಿರುವದರ ವಿಶೇಷವಾದ ಕಾರ್ಯವನ್ನು ಪೂರ್ಣಗೊಳಿಸಿದನು: "ಶಿಲುಬೆ ಮೇಲೆ ನಮ್ಮ ಪಾಪಗಳನ್ನು ತನ್ನ ದೇಹದಲ್ಲಿ ಹೊತ್ತನು" ಇದು ದೇವರ ಉದ್ದೇಶವಾಗಿತ್ತು (1 ಪೇತ್ರ 2:24). [35]"ವಾಕ್ಯವನ್ನು ನೇರ ವೇರಿಸುವುದಕ್ಕೆ" ಎನ್ನುವ ಶಬ್ದಗಳು ಯೇಸುವಿನ ವ್ಯಾಖ್ಯಾನವನ್ನು ಸೂಚಿಸುವದನ್ನು ಕಾಣುತ್ತೇವೆ. "ನನಗೆ ನೀರಡಿಕೆಯಾಗಿದೆ" ಹಳೆ ಒಡಂಬಡಿಕೆಯ ವಾಕ್ಯ ನೆರವೇರಿದೆ. ಈ ಸಂಗತಿ ಇರುವುದಾದರೆ, ವಚನವು ಕೀರ್ತನೆಗೆ ಸೂಚಿಸುತ್ತದೆ ಕೀರ್ತನೆ 22:15ಬಿ ಅಥವಾ 69:21. "ವಾಕ್ಯವನ್ನು ನೆರವೇರಿ ಸುವದಕ್ಕೆ" ಎನ್ನುವಾಗ ಯೇಸು ಶಿಲುಬೆ ಮೇಲೆ ಅನುಭವಿಸಿದ ಅನುಭವ ಸಹ ಆಗಿರಲು ಸಾಧ್ಯವಿರುತ್ತದೆ. [36]ಹಿಸ್ಸೋಪ್ ಒಂದು ಕಾಡಿನ ಗಿಡ ಅದು ನೀಲಿ ಹೂ ಬಿಡುತ್ತದೆ. ಅದರ ಕಾಂಡವು ಎರಡು ಅಥವಾ ಮೂರು ಅಡಿ ಎತ್ತರ ಬೆಳೆಯುತ್ತದೆ. [37]ಗ್ರೀಕ್ ಶಬ್ದ "ನೆರವೇರಿಸಿದ್ದೇನೆ" ಎಂದು ಯೋಹಾನ 17:4ರಲ್ಲಿ ಮತ್ತು ಅದನ್ನು ಯೋಹಾನ 19:30ರಲ್ಲಿ "ತೀರಿತು" ಎಂದು ಅನುವಾದಿಸಿದೆ ಅವರೆಡರ ಮೂಲ ಆಗಿರುತ್ತದೆ. [38]Dean, 29. ಯೇಸು ಹಳೆ ಒಡಂಬಡಿಕೆ "ನೇರವೇರಿಸಿದ್ದಾನೆ" (ನೋಡಿ ಮತ್ತಾಯ 5:17, 18). ಆ ಒಂದು ಆಲೋಚನೆಯಲ್ಲಿ, ಆತನನ್ನು ಮೊಳೆಯಿಂದ ಶಿಲುಬೆಗೆ ಜಡಿದು ಒಡಂಬಡಿಕೆ ನೇರವೇರಿಸಿದನು (ನೋಡಿ ಕೊಲಸ್ಸೆ 2:14), ಹೊಸ ನಿಬಂದನೆಯ ಅಥವಾ ಒಡಂಬಡಿಕೆಯ ಪ್ರಕಟಣೆಗಾಗಿ ಮಾರ್ಗವನ್ನು ಸಿದ್ಧಮಾಡುತ್ತಿದ್ದನು (ನೋಡಿ ಇಬ್ರಿಯ 9:15-17). [39]Charles R. Swindoll, *Jesus, Our Lord* (Fullerton, Calif.: Insight for Living, 1987), 27. [40]ಯೇಸು ಪುನಃ ಆ ಹಳೆ ಒಡಂಬಡಿಕೆಯ ವಿಜ್ಞಾನವನ್ನು ಉಪಯೋಗಿಸಿರಬಹುದು (ಕೀರ್ತನೆ 31:5). ಇರುವುದಾದರೆ ಬರಹಗಾರನಿಗಿಂತ ಹೆಚ್ಚಾಗಿ ಆತನು ಮನಸ್ಸಿನ ಮೇಲೆ ಪರಿಣಾಮ ಬೀರುವಂತೆ ಆತನು ಉಪಯೋಗಿಸಿದ್ದಾನೆ ಕೀರ್ತನೆ 31.

[41]ಆತನು ಶರೀರ ಸ್ಥಿತಿಯಲ್ಲಿ ಅತ್ತುಬಿಟ್ಟನು ಎನ್ನುವ ಅಂಶವು ಆಶ್ಚರ್ಯಕರವಾಗಿದೆ. [42]ಈ ಅಭ್ಯಾಸದ ಮೊದಲನೆಯ ಸಾರಿ, ಒತ್ತಿ ಹೇಳಿದ್ದೇನೆಂದರೆ, ನಿಯಮದಂತೆ, ಅನೇಕ ದಿನಗಳವರೆಗೆ ಮನುಷ್ಯರನ್ನು ಶಿಲುಬೆ ಮೇಲೆ ಬಿಡುತ್ತಿದ್ದರು. ಮುಂದಿನ ನಮ್ಮ ಅಭ್ಯಾಸವು ಹೇಳುತ್ತದೆ ಅದೇನೆಂದರೆ ಯೇಸು ಈಗಾಗಲೇ ಸತ್ತು ಹೋಗಿದ್ದಾನೆ ಇದನ್ನು ನೋಡಿದವನೊಬ್ಬ ಆಶ್ಚರ್ಯಪಟ್ಟನು (ಮಾರ್ಕ 15:44). [43]ಈ ಅಭ್ಯಾಸವು ಮತ್ತು ಮುಂದಿನ ಚರ್ಚೆಯು ಯೇಸುವಿನ ಮರಣದ ವಿಷಯದ ಕುರಿತ ಲೇಖನ ಇರುವದು ಕಂಡುಬರುತ್ತದೆ, ಆದರೆ ಆತನು ಮಾಡಿದ ನಿರ್ಧಾರ ಮುಖ್ಯವಾದ ಅಂಶವಾಗಿದೆ. ಕೆಲವರು ಇದನ್ನು ನಿರಾಕರಿಸಬಹುದು, ಇದನ್ನು ಆತ್ಮಹತ್ಯ ಎನ್ನುವ ರೀತಿಯಲ್ಲಿ ಧ್ವನಿಸುತ್ತದೆ. ನಾನು ಅದನ್ನು ಯೇಸು ತನ್ನನ್ನು ತಾನು ಕೊಲೆ ಮಾಡಿಕೊಳ್ಳಲಿಲ್ಲ ಎಂದು ಅವಸರದಿಂದ ಹೇಳುತ್ತೇನೆ; ಸತ್ಯವೇದ ಸ್ಪಷ್ಟಪಡಿಸುತ್ತದೆ ಅದೇನೆಂದರೆ ಆತನನ್ನು ಯೆಹೂದ್ಯರು ಮತ್ತು ರೋಮನ್ನರು "ಮರಣಕ್ಕೆ ಒಪ್ಪಿಸಿದರು" (ಅಪೊಸ್ತಲರ ಕೃತ್ಯಗಳು 2:23; 3:15; 5:30; 10:39). ಅದೇ ಸಮಯದಲ್ಲಿ ಆತನು ತನ್ನ ದೇಹದ ಮೇಲೆ ಅದಿನತೆ ಹೊಂದಿದ್ದನು. ನನ್ನ ಸಹೋದರ ಗುರುತಿಸಿದ್ದಾರೆ. ಅಲ್ಲಿ ಆತ್ಮಹತ್ಯೆಗೂ ಮತ್ತು ಬಲಿಯಾಗಿ ಅರ್ಪಿಸುವ ಮರಣಕ್ಕೂ ವ್ಯತ್ಯಾಸವಿದೆ ಎಂಬುದಾಗಿ ಬಲಿಯಾಗಿ ಅರ್ಪಿಸುವ ಮರಣಕ್ಕೆ ಒಂದು ಉದಾಹರಣೆ ಕೊಟ್ಟಿದ್ದಾನೆ ಸೈನಿಕನು ತನ್ನ ಸಹ ಸೈನಿಕರನ್ನು ಕಾಪಾಡಲು ತನ್ನಲ್ಲಿರುವ ಸಿಡಿಗುಂಡನ್ನು ಸ್ವಮನಸ್ಸಿನಿಂದ ಅವರನ್ನು ಕಾಪಾಡಲು ಎಸೆಯುತ್ತಾನೆ (Personal correspondence, 3 April 2002). [44]ಈ ಅದ್ಭುತಗಳನ್ನು ಗುರುತಿಸುವ ಚಿಹ್ನೆಗಳಿಗಾಗಿ "ಕಲ್ವಾರಿಯ ಅದ್ಭುತ"ಎಂಬ ಪಾಠವನ್ನು ನಂತರ ಈ ಪುಸ್ತಕದಲ್ಲಿ ನೋಡಿ. [45]ಮೂಲ ಪಠ್ಯದಲ್ಲಿ ಮತ್ತಾಯ 27:54 ಅಥವಾ ಮಾರ್ಕ 15:39ರಲ್ಲಿ ನಿರ್ದಿಷ್ಟವಾದ ಉಪಪದಹೊಂದಿದೆ ("the," "ಅವನೇ," "ಅವಳೇ" ಎಂದರ್ಥ), ಆದರೆ ಇಲ್ಲಿ ತಪ್ಪಾಗಿ ಈ ಭಾಗವನ್ನು ಅನುವಾದಿಸಿದ್ದಾನೆ "ದೇವ ಕುಮಾರನು"

ಎಂದು ಮಾಡಬೇಕಾಗಿತ್ತು. ಅಲ್ಲಿ ಸೈನಿಕರು ಹೇಳಿರುವದು “ನಿಜವಾಗಿಯೂ ಆತನು ದೇವಕುಮಾರನೇ ಆಗಿದ್ದಾನೆ!” [46]G. C. Brewer, *Christ Crucified: Brewer's Sermons* (Nashville: B. C. Goodpasture, 1952), 43–55.